ಸಂಪುಟ ೧೭ ಸಂಚಿಕೆ ೩ ಸೆಪ್ಟೆಂಬರ್ ೧೯೯೬

ಬ್ಯಾಂಕಿಂಗ್ ಪ್ರಪಂಚ

ವಾರ್ಷಿಕ ಚಂದಾ : ರೂ. 20
ಆಜೀವ ಚಂದಾ : ರೂ. 200

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ, ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ನೂತನ ಖಾಸಗಿ ಬ್ಯಾಂಕುಗಳು

ಪ್ರೊ. ಸಿ. ಗೋವಿಂದಾಚಾರ್

ಆಚಾರ್ಯ ಪಾಠಶಾಲಾ ಕಾಲೇಜ್, ಬೆಂಗಳೂರು

ಸ್ಥೂಲದೇಹಿಗಳಾದ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸವಾಲಾಗಿ ಪರಿಣಮಿಸುತ್ತಿರುವ ನೂತನ ಖಾಸಗಿ ಬ್ಯಾಂಕುಗಳು ಮೂಲತಃ ಹಲವು ಅನುಕೂಲಗಳನ್ನು ಪಡೆದಿದ್ದರೂ ಕೆಲವು ತೊಂದರೆಗಳನ್ನೂ ಅನುಭವಿಸಬೇಕಾಗಿದೆ. ಆರಂಭದ ತೊಡಕುಗಳನ್ನೆಲ್ಲ ನಿವಾರಿಸಿಕೊಂಡು ಈ ಬ್ಯಾಂಕುಗಳು ವ್ಯವಹಾರಲೋಕದಲ್ಲಿ ದಾಂಗುಡಿಯಿಡತೊಡಗಿದಾಗ ನಮ್ಮ ಭಾರಿ ಬ್ಯಾಂಕುಗಳಿಗೆ ಪ್ರಾಣಸಂಕಟ ಸ್ವತಃಸಿದ್ಧ.

ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲಿ ಸ್ಪಷ್ಟವಾಗಿ ಗೋಚರಿಸುವಂಥ ಮೈಲಿಗಲ್ಲುಗಳೆಂದರೆ: (ಅ) ಸಾಮಾಜಿಕ ನಿಯಂತ್ರಣ–ರಾಷ್ಟ್ರೀಕರಣ. (ಆ) ರಾಷ್ಟ್ರೀಕರಣದ ಅನಂತರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಅಲೆ, (ಇ) ಅವ್ಯವಹಾರಗಳ ಹಿನ್ನೆಲೆಯಲ್ಲಿ ಬಿರುಸಿನ ಸುಧಾರಣೆಗಳ ಮೂಲಕ ಮತ್ತಷ್ಟು ಉದಾರೀಕರಣ. ಇಂಥ ಸುಧಾರಣೆಗಳ ಪೈಕಿ ಖಾಸಗಿ ಬ್ಯಾಂಕುಗಳ ಸ್ಥಾಪನೆಯೂ ಒಂದು. ಅರ್ಥವ್ಯವಸ್ಥೆಯಲ್ಲಿ ದ್ರವ್ಯತೆಯ ಬಿಕ್ಕಟ್ಟು, ಬೃಹದಾಕಾರವಾಗಿ ಬೆಳೆದ ಅದಕ್ಷ ರಾಷ್ಟ್ರೀಕೃತ ಬ್ಯಾಂಕುಗಳು ಒಂದು ಕಡೆ, ನಯ ನಾಜೂಕಾದ ವಿದೇಶಿ ಬ್ಯಾಂಕುಗಳು ಮತ್ತು ಹಣಕಾಸಿನ ಸಂಸ್ಥೆಗಳು ಇನ್ನೊಂದು ಕಡೆ. ಅನಿಯಂತ್ರಿತ ಬಡ್ಡಿದರ ಆಳ್ವಿಕೆ ಮುಂತಾದ ಗಂಭೀರವಾದ ವಾತಾವರಣದಲ್ಲಿ ಈ ಬ್ಯಾಂಕುಗಳು ಕಾಣಿಸಿಕೊಂಡುವು. ಉತ್ತಮ ಗುಣಮಟ್ಟದ ಸೇವೆ ಕೊಡುವುದರ ಮೂಲಕ ವಿದೇಶಿ ಬ್ಯಾಂಕುಗಳ ಸಮಕ್ಕೆ ಸ್ಪರ್ಧಿಸಲು ಇವು ಸಂಕಲ್ಪಿಸಿದುವು. 1993ರಲ್ಲೇ ಭಾರತೀಯ ರಿಸರ್ವ್ ಬ್ಯಾಂಕ್ ಖಾಸಗಿ ಬ್ಯಾಂಕುಗಳ ಸ್ಥಾಪನೆಗಾಗಿ ಅಧಿಕೃತ ಆದೇಶ ನೀಡಿದ್ದರೂ, ಏಪ್ರಿಲ್ 1994ರಲ್ಲಿ ಪ್ರಥಮವಾಗಿ ಇಂಡಸ್‌ಇಂಡ್ ಬ್ಯಾಂಕ್ ಸ್ಥಾಪಿತವಾಗಿ ಡಿಸೆಂಬರ್ 1995ರ ವೇಳೆಗೆ ಒಟ್ಟು 10 ಬ್ಯಾಂಕುಗಳು ಅಸ್ತಿತ್ವದಲ್ಲಿದ್ದವು. ಪ್ರಸ್ತುತ ಖಾಸಗಿಕ್ಷೇತ್ರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಇವು ಈ ಕೆಳಕಂಡಂತೆ ವಿಭಿನ್ನವಾಗಿವೆ: (ಅ) ಭಾರತೀಯ ಕಂಪೆನಿ ಅಧಿನಿಯಮ (1956)ರ ಪ್ರಕಾರ ನೋಂದಾಯಿಸಲ್ಪಟ್ಟಿದೆ. ಆದರೆ (ಆ) ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ (1934) ಹಾಗೂ ಬ್ಯಾಂಕಿಂಗ್ ವಿನಿಮಯ ಕಾಯ್ದೆ (1949)ಗಳ ಪಾಲನೆಗೆ ಒಳಪಟ್ಟಿದೆ. (ಇ) ಷೇರು ಪಟ್ಟೀಕರಣ ಆಗಬೇಕು. (ಈ) ಉದರಿ ಮಾಪನೆಗೆ ಅನ್ವಯಿಸಿದೆ. ಇವಲ್ಲದೆ ಶೇ. 8ರಷ್ಟು ಬಂಡವಾಳ ಪರ್ಯಾಪ್ತತೆಯನ್ನು ಹೊಂದಿರಬೇಕು ಹಾಗೂ ಬ್ಯಾಂಕ್ ವ್ಯವಹಾರಗಳ ಲೆಕ್ಕ ರೀತಿನೀತಿಗಳು ವಿವೇಕಯುಂತವಾದ ಮಾನಕಗಳಿಗೆ ಒಳಪಟ್ಟಿರಬೇಕು. ಆದರೆ ರೂಪುರೇಷೆಗಳಲ್ಲಿ ಮತ್ತು ಕಾರ್ಯಾಚರಣೆಯಲ್ಲಿ ಇವು ಖಾಸಗಿಕ್ಷೇತ್ರದ ಘಟಕಗಳೆಂದು ಪರಿಗಣಿಸಲ್ಪಟ್ಟಿವೆ.

ಗಟ್ಟಿಗ ಬ್ಯಾಂಕುಗಳು

ಭೀಮಪ್ರವರ್ತಕರಿಂದ ಮೇಲೆದ್ದ ಈ ಬ್ಯಾಂಕುಗಳು ದೇಶ-ವಿದೇಶಗಳ ನಿಕಟಸಂಪರ್ಕವನ್ನು ಹೊಂದಿ ಬಹಳ ಗಟ್ಟಿಗ ಬ್ಯಾಂಕುಗಳೆಂದೆನಿಸಿಕೊಂಡಿವೆ. ಗ್ರಾಹಕ ಹಾಗೂ ಹೂಡುವವನ ದೃಷ್ಟಿಕೋನದಿಂದ ಮತ್ತು ಪೇಟೆಯಲ್ಲಿ ತಲೆ ಎತ್ತಿ ವಿವಿಧ ಹಾಗೂ ನೂತನ ಬ್ಯಾಂಕಿಂಗ್ ಉತ್ಪನ್ನಗಳನ್ನು (Banking Products) ಗ್ರಾಹಕ ಸಮುದಾಯಕ್ಕೆ ಪರಿಚಯಮಾಡಿಕೊಳ್ಳಲು ಈ ಸಿರಿವಂತ ಪ್ರವರ್ತನೆ ಮತ್ತು ಸಂಪರ್ಕಜಾಲ ಗಮನಾರ್ಹ. ಹಲವು ರಾಷ್ಟ್ರೀಕೃತ ಹಾಗೂ ಖಾಸಗಿಕ್ಷೇತ್ರದ ಬ್ಯಾಂಕುಗಳೊಡನೆ ಸ್ಥಳೀಯ ಸಂಪರ್ಕವಿಟ್ಟುಕೊಂಡಿರುವುದು ಇವುಗಳ ಲಕ್ಷಣಗಳಲ್ಲೊಂದಾಗಿದೆ. (ಕೋಷ್ಟಕ ನೋಡಿ.) ಮತ್ತೊಂದು ಅಪರೂಪದ ವಿಚಾರವೆಂದರೆ ಸಹಕಾರಿ ಬ್ಯಾಂಕೊಂದು ಖಾಸಗಿ ಬ್ಯಾಂಕಾಗಿ ಪರಿವರ್ತಿಸಿರುವುದು. ಅಭಿವೃದ್ಧಿ ಸಹಕಾರಿ ಬ್ಯಾಂಕೊಂದು ಖಾಸಗಿ ಬ್ಯಾಂಕಾಗಿ ಪರಿವರ್ತಿಸಿರುವುದು. ಅಭಿವೃದ್ಧಿ ಸಹಕಾರಿ ಬ್ಯಾಂಕು ಅಭಿವೃದ್ಧಿ ಉದರಿ ಬ್ಯಾಂಕಾಗಿ ಮುಂಬೈನಲ್ಲಿ ಉದಯಿಸಿತು.

ಭದ್ರವಾದ ಬಂಡವಾಳ ಮೂಲವನ್ನು ಹೊಂದುವ ಗುರಿ ಇದ್ದರೂ ಸಣ್ಣ ಪ್ರಮಾಣದ ಠೇವಣಿ ಬುನಾದಿಯೊಂದಿಗೆ ಇವು ವ್ಯಾಪಾರವನ್ನಾರಂಭಿಸಿದುವು. ಮೊದಮೊದಲು ನಿಗಮವಲಯದ ಸಾವಧಿ ಠೇವಣಿಗಳು ಪ್ರಾಪ್ತವಾದುವು. ವಿದೇಶಿ ಸಂಸ್ಥೆಗಳಿಂದ ಶೇ. 20ರಷ್ಟು ಮತ್ತು ಅನಿವಾಸಿ ಭಾರತೀಯರಿಂದ ಶೇ. 40ರಷ್ಟು ಬಂಡವಾಳ ಎತ್ತಲು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಚ್ 1994ರಲ್ಲಿ ಹೊಸ ಬ್ಯಾಂಕುಗಳಿಗೆ ಅನುಮತಿ ನೀಡಿತು.

ವಿದೇಶಿ ಜಲಾರ್ಥ ಅನಿವಾಸಿ ಠೇವಣಿಗೆ ಮೊದಲು ಜಿಗಿದ ಬ್ಯಾಂಕು ಇಂಡಸ್ ಬ್ಯಾಂಕ್ (ಶೇ. 30ರಷ್ಟು). ಇದರ ನಿಗಮ ಠೇವಣಿ ಸಂಗ್ರಹಣೆ ಸುಮಾರು ಶೇ. 20ರಷ್ಟು. ಹಿಂದುಜ ಕುಟುಂಬ ಪ್ರವರ್ತನೆಯ ಹಿನ್ನೆಲೆಯಲ್ಲಿದ್ದುದರಿಂದ ಸಿಂಧಿ ಸಮುದಾಯಕ್ಕೆ ಸೇರಿದ ಅನಿವಾಸಿ ಠೇವಣಿ ಮೂಲಗಳು ಬ್ಯಾಂಕಿನ ಆರಂಭ ಕಾರ್ಯಕ್ಕೆ ಒತ್ತು ಕೊಟ್ಟುವು. ಹೀಗೆಯೇ ಸೆಂಚುರಿಯನ್ ಬ್ಯಾಂಕಿಗೆ ಸಿಂಗಪೂರ್‌ನ ಕೆಪ್ಪೆಲ್ಸ್‌ನಿಂದ ಶೇ. 20ರಷ್ಟು, ಏಷ್ಯ ಅಭಿವೃದ್ಧಿ ಬ್ಯಾಂಕಿನಿಂದ ಶೇ. 11ರಷ್ಟು ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಬಂಡವಾಳ ನಿಧಿ ಪ್ರಾಪ್ತ ವಾಗಿದೆ. ಗ್ಲೋಬಲ್ ಟ್ರಸ್ಟ್ ಬ್ಯಾಂಕಿಗೆ ಮಲೇಸಿಯಾದಿಂದ, ಟೈಮ್ಸ್ ಬ್ಯಾಂಕಿಗೆ ಜರ್ಮನಿಯಿಂದ ಬೆಂಬಲವಿದೆ. ಪೋಷಕ ಪ್ರವರ್ತಕ ಸಂಸ್ಥೆಗಳಿಂದ ಬೆಂಬಲ ಪಡೆದ ಬ್ಯಾಂಕುಗಳೆಂದರೆ ಯುಟಿಐ ಬ್ಯಾಂಕು, ಐಸಿಐಸಿಐ ಬ್ಯಾಂಕು ಮತ್ತು ಐಡಿಬಿಐ ಬ್ಯಾಂಕು (ಪೋಷಕ ಸಂಸ್ಥೆ ಐಡಿಬಿಐ ಕೊಡುಗೆ 80% ಮತ್ತು ಸಿಡ್‌ಬಿಐ (SIDBI) 20%). ಎಚ್‌ಡಿಎಫ್‌ಸಿ ಬ್ಯಾಂಕಿನ 200 ಕೋಟಿ ಸಾಮ್ಯಬಂಡವಾಳದಲ್ಲಿ ಪೋಷಕ ಸಂಸ್ಥೆ 20%, ಇಂಗ್ಲೆಂಡಿನ ನ್ಯಾಟ್‌ವೆಸ್ಟ್ 20% ಕೊಡುಗೆ ಇದೆ. ಅಭಿವೃದ್ಧಿ ಉದರಿ ಬ್ಯಾಂಕ್‌ಗೆ ಆಗಾಖಾನ್ ನಿಧಿ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಗಮದಿಂದ ಬಂಡವಾಳ ಬೆಂಬಲವಿದೆ. ಫೆಬ್ರುವರಿ 1996ರಲ್ಲಿ ವಿದೇಶಿ ಜಲಾರ್ಥದಲ್ಲಿ ಅಡಗಿರುವ ನಷ್ಟಸಂಭಾವ್ಯತೆ ಯನ್ನು ತಡೆಗಟ್ಟುವ ಸೌಲಭ್ಯವನ್ನು ರಿಸರ್ವ್ ಬ್ಯಾಂಕ್ ನಿಲ್ಲಿಸಿದ್ದ ರಿಂದ, ಈ ಬ್ಯಾಂಕುಗಳಿಗೆ ಅನಿವಾಸಿ ಠೇವಣಿಗಳು ಸ್ಥಗಿತ ಗೊಂಡವು. ಒಳ್ಳೆ ಠೇವಣಿ ಮೂಲ ಸಿಗದ ಬ್ಯಾಂಕುಗಳು ರಫ್ತು ಪುನರ್ಧನ ಯೋಜನೆಯನ್ನು ಹಮ್ಮಿಕೊಂಡು ತಮ್ಮ ಸಾಲ ವಹಿ ವಾಟಗಳನ್ನು ವಿಸ್ತರಿಸಿಕೊಂಡವು. ಆದರೂ ಠೇವಣಿ ಸಂಗ್ರಹಣೆಗೆ ತೀವ್ರ ಸ್ಪರ್ಧೆ ನಿರಂತರವಾಗಿ ಸಾಗುತ್ತಿದೆ. ಇದು ಅನಿವಾರ್ಯ. ಠೇವಣಿಗಳು ಎಷ್ಟು ಶೀಘ್ರವಾಗಿ ಪ್ರಾಪ್ತವಾಗುವುವು ಎಂಬುದರ ಮೇಲೆ ಆಸ್ತಿಗಳ ವರ್ಧನೆ ಅವಲಂಬಿಸಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕಿನ ಮುಖ್ಯಸ್ಥ ಆದಿತ್ಯಪುರಿ ಅಭಿಪ್ರಾಯಪಡುತ್ತಾರೆ. ಕೆಲವು ಬ್ಯಾಂಕುಗಳು ಅತ್ಯಾಕರ್ಷಕವಾದ ಪ್ರಚಾರ ಮತ್ತು ಉಡುಗೊರೆಗಳ ಮೂಲಕ ಠೇವಣಿಗಳನ್ನು ಸಂಗ್ರಹಿಸಲು ಯತ್ನಿಸಿದುವು. ಉದಾ : ರೂ. 25,000 ಮತ್ತು ಮೇಲ್ಪಟ್ಟ ಮೊತ್ತವನ್ನು ಕನಿಷ್ಠ ಪಕ್ಷ 2 ವರ್ಷ ಅವಧಿ ವರೆಗೆ ನೀಡಿದ ಗ್ರಾಹಕನಿಗೆ ಯೂರೋಪ್, ಸಿಂಗಪೂರ್‌ಗಳ 10 ದಿನ ಪ್ರವಾಸ, ಅಡಿಗೆ ಮನೆ ಸಲಕರಣೆಗಳು ಹಾಗೂ ಇನ್ನೂ 11 ಸಾವಿರ ಆಕರ್ಷಕ ಬಹುಮಾನಗಳ ಮೂಲಕ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಧಾವಿಸಿತು. ಆದರೆ ರಿಸರ್ವ್ ಬ್ಯಾಂಕ್ ಇಂಥಾ ಯೋಜನೆಯನ್ನು ಲಾಟರಿ ಎಂದು ಆಕ್ಷೇಪಿಸಿ ಭಾರತೀಯ ಬ್ಯಾಂಕರುಗಳ ಸಂಸ್ಥೆಯ (IBA) 'ಗ್ರೇಸ್' (Ground Rules and Code of Ethics for Banks) ಶರತ್ತುಗಳಿಗೆ ಇವು ವಿರುದ್ಧ ಎಂದು ನಿಷೇಧಿಸಿತು. ರೂ. 75ರ ವರೆಗೆ ಮಾತ್ರ ಬ್ಯಾಂಕು ಗಳು ಉಡುಗೊರೆಗಳನ್ನು ಕೊಡಬಹುದು ಎಂದು ಸ್ಪಷ್ಟಪಡಿಸಿತು. ಈ ಯೋಜನೆಯನ್ನು ಹೊಸ ಬ್ಯಾಂಕುಗಳು ಕೈಬಿಟ್ಟಂತೆ ಮಾಡಿ ಬೇರೆ ರೂಪದಲ್ಲಿ ಉಡುಗೊರೆ ಆಕರ್ಷಣೆಯಿಂದ ಪರೋಕ್ಷವಾಗಿ ತಮ್ಮ ಗುರಿಯನ್ನು ಸಾಧಿಸಿಕೊಂಡುವು. "ನಿಧಿಸಂಗ್ರಹಣೆ ಮಾಡು ವಲ್ಲಿ ಬಿಕ್ಕಟ್ಟಿರುವಾಗ ಇಂಥ ಯೋಜನೆಗಳನ್ನು ಹಮ್ಮಿಕೊಂಡರೆ ತಪ್ಪೇನಿಲ್ಲ" ಎಂದು ಬ್ಯಾಂಕುಗಳ ಮುಖ್ಯಸ್ಥರು ಸಮರ್ಥಿಸಿ ಕೊಂಡರು.

ವ್ಯವಹಾರ ಕೌಶಲ

ಸಾರ್ವಜನಿಕ ಬಂಡವಾಳ ಕಲಾಪಗಳಲ್ಲಿ ಮೂರು ಬ್ಯಾಂಕುಗಳು ಸಫಲವಾಗಿವೆ. ಯುಟಿಐ ಬ್ಯಾಂಕ್ ರೂ. 500 ಕೋಟಿ ಬಂಡವಾಳ ಎತ್ತಲು ಪೇಟೆಗೆ ಕಾಲಿಟ್ಟಿತು. ಕೆಲವು ಅಧಿಮೌಲ್ಯದ ಸವಿ ಯನ್ನುಂಡುವು. ಗೋಬಲ್ ಟ್ರಸ್ಟ್‌ನ 10 ರೂ. ಶೇರು 75 ರೂಪಾಯಿಗಳಿಗೆ, ಎಚ್‌ಡಿಎಫ್‌ಸಿ ಬ್ಯಾಂಕಿನ 10 ರೂ. ಶೇರು ಶೇ. 45ಕ್ಕೆ ಏರಿತು. ಅಲ್ಲದೆ ಬ್ಯಾಂಕಿಗೆ 10ಪಟ್ಟು ಅಧಿಕ ಚಂದಾ ಪ್ರಾಪ್ತವಾಯಿತು. ಹೀಗೆಯೇ ಬ್ಯಾಂಕ್ ಆಫ್ ಪಂಜಾಬ್. ನಗರಾ ಧಾರಿತವಾದ ಚಟುವಟಿಕೆಗಳಿಂದಾಗಿ ಈ ಬ್ಯಾಂಕುಗಳಿಗೆ ದುಬಾರಿ ಬಂಡವಾಳ ಅನಿವಾರ್ಯವಾಯಿತು.

ವರಮಾನದ ದೃಷ್ಟಿಯಿಂದ ನೋಡಿದರೆ ಈ ಬ್ಯಾಂಕುಗಳ ಸಾಧನೆ ಚೆನ್ನಾಗಿಯೇ ಸಾಗಿದೆ ಎಂದು ಹೇಳಬಹುದು. ಪ್ರತಿ ಯೊಂದು ಬ್ಯಾಂಕಿಗೆ ತನ್ನದೇ ಆದ ನೀತಿಪೂರ್ಣ ಮತ್ತು ತಂತ್ರಾ ಧಾರಿತವಾದ ವ್ಯಾಪಾರವಿದೆ. ಹೆಚ್ಚು ವರಮಾನ ತರುವ ಆಸ್ತಿ ಗಳಲ್ಲಿ ಹಣ ತೊಡಗಿಸಿ ಭದ್ರವಾದ ಠೇವಣಿ ಮೂಲ ಸಿಗುವವರೆಗೂ ಬಡ್ಡೀತರ ವರಮಾನದಲ್ಲಿ ನಿರ್ವಹಿಸಿರುವ ಇವುಗಳ ಕಾರ್ಯತಂತ್ರ ಮೆಚ್ಚಬೇಕಾದ್ದೇ. ಉದರಿ ಪತ್ರ, ವಿದೇಶಿ ವಿನಿಮಯ ಸಲಹಾ ಸೇವೆ, ಹಣ ರವಾನೆ, ಕಮಿಷನ್, ಬೃಹತ್ ನಿಗಮಗಳಿಗೆ ಸಂಗಮ ಸಾಲ (Syndicated Loans) ಮುಂತಾದ ಶುಲ್ಕ ಆಧಾರಿತ ವಾದ (Fee-based Income) ವರಮಾನದ ಮೇಲೆ ಕೇಂದ್ರೀಕರಿಸಿವೆ. ಉದಾ : ಐಸಿಐಸಿಐ ಬ್ಯಾಂಕಿನ ಲಾಭದಲ್ಲಿ ಶುಲ್ಕ ವರಮಾನ ಶೇ. 20ರಷ್ಟಾಗಿದೆ.

ಈ ಬ್ಯಾಂಕುಗಳು ಎಷ್ಟು ಹೊಸವೋ ಅವುಗಳ ವ್ಯವಹಾರ ಗಳು, ಬಳಸುವ ಸಂಲೇಖಗಳು ಅಷ್ಟೇ ಹೊಸವು. ಉದಾ: ದ್ವಿತೀಯ ಪೇಟೆಯಲ್ಲಿ ಕಾಣಿಸಿಕೊಂಡಿರುವ ನಿಷ್ಪನ್ನಗಳು, (Derivatives in Secondary Markets), ಅಸ್ಥಿರ ಠೇವಣಿಗಳು (Unfixed Deposits) ಮತ್ತು ಕ್ಲಸ್ಟರ್ ಠೇವಣಿಗಳು (Cluster Deposits).

ಎಚ್‌ಡಿಎಫ್‌ಸಿ ಬ್ಯಾಂಕಿನ ಹರಿವಿನಲ್ಲಿ (Bank Spread) ಖಜಾನೆ ವ್ಯವಹಾರಗಳು, ವಿನಿಯೋಜನ ನಿರ್ವಹಣೆ, ಕರೆಹಣ ವ್ಯವಹಾರ, ಉದರಿಪತ್ರ, ಹಣ ರವಾನೆ, ರಫ್ತು ಉದರಿ ಇತ್ಯಾದಿ ಗಳು ಸೇರಿವೆ. ಪೋಷಕ ಸಂಸ್ಥೆಯಲ್ಲಿರುವ ಸುಮಾರು 800 ದಶಲಕ್ಷ

ಸ್ಟಾಕ್‌ಇನ್‌ವೆಸ್ಟ್‌ಗಳನ್ನು ಈ ಬ್ಯಾಂಕಿನ ರೂ. 50 ಕೋಟಿ ಬಂಡವಾಳ ರೂಪದಲ್ಲಿ ಉಪಯೋಗಿಸಲಾಗಿದೆ. ಒಳ್ಳೆಯ ಲೆಕ್ಕ ರೀತಿನೀತಿಗಳ ಪಾಲನೆಗಾಗಿ ಪ್ರತ್ಯೇಕವಾದ ಲೆಕ್ಕ ಪರಿಶೋಧನೆಯ ವಿಭಾಗವಿದೆ. ಕ್ರಿಸಿಲ್ ಮಾಪನದ ಪ್ರಕಾರ ಎಚ್‌ಡಿಎಫ್‌ಸಿ ಮತ್ತು ಇಂಡಸ್ ಬ್ಯಾಂಕುಗಳನ್ನು ಪ್ರಥಮ ದರ್ಜೆ ವಣಿಕ ಬ್ಯಾಂಕೆಂದೂ ಐಸಿಐಸಿಐ 'ಡೆಸಿಗ್ನೇಟೆಡ್' ಬ್ಯಾಂಕೆಂದೂ ಪರಿಗಣಿಸ ಲಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಅಥವಾ ಹಣಕಾಸಿನ ಸಂಸ್ಥೆಗಳ ಖಾತಾ ನಿರ್ವಹಣೆಯನ್ನು ಈ ಬ್ಯಾಂಕು ನೋಡಿಕೊಳ್ಳು ವುದು.

ಗ್ಲೋಬಲ್ ಟ್ರಸ್ಟ್ ಬ್ಯಾಂಕಿಗೆ ಹುಂಡಿ ಮುರಿಸುವ ವ್ಯಾಪಾರ ಶೇ. 30ರಷ್ಟಾದರೆ ರಫ್ತುಸಾಲ ಪೂರೈಕೆ ಶೇ. 50ರಷ್ಟಾಗಿದೆ. ಅಭಿವೃದ್ಧಿ ಉದರಿ ಬ್ಯಾಂಕ್‌ನ ವಹಿವಾಟುಗಳು—ಬಾಡಿಗೆ ಕೊಳ್ಳಿಕೆ, ಗುತ್ತಿಗೆ ವ್ಯವಹಾರ, ಸಹಕಾರಿ ಸಂಸ್ಥೆಗಳ ಮೂಲಕ ಸಣ್ಣ ಪ್ರಮಾಣದ ಗ್ರಾಹಕರಿಗೆ ಉದರಿ ಒದಗಣೆ ಇತ್ಯಾದಿ. 1996ರಲ್ಲಿ ಈ ಸಾಲದ ಮೊತ್ತ 5 ಕೋಟಿ ರೂಪಾಯಿಗಳು. ಪರಿವರ್ತನೆ ಆಗುವುದಕ್ಕೆ ಮುಂಚೆ 14 ವರ್ಷಗಳ ಅವಧಿಯಲ್ಲಿ ಅಂದಿನ ಅಭಿ ವೃದ್ಧಿ ಸಹಕಾರಿ ಬ್ಯಾಂಕು ಈ ದಿಸೆಯಲ್ಲಿ 9 ಕೋಟಿ ರೂ. ಸಾಲ ಕೊಟ್ಟಿತ್ತು. ಎಲ್ಲಾ ತರಹದ ವಿದೇಶಿ ಸೇವೆಗಳಿಗಾಗಿ 'ಫಾರೆಕ್ಸ್' 'ವಿಶ್ವಬ್ಯಾಂಕಿಂಗ್' ಎಂದು ಪ್ರತ್ಯೇಕ ವಿಭಾಗಗಳಿವೆ. (ಅಂಕಿ ಅಂಶ ಗಳು ವಾರ್ಷಿಕ ಸಭೆಯಲ್ಲಿ ಮಾಡಿದ ಭಾಷಣದಿಂದ) ವಿಶ್ವ ಹಾಗೂ ಸ್ಥಳೀಯ ಬ್ಯಾಂಕಿಂಗ್ ವ್ಯವಹಾರಗಳೆರಡನ್ನೂ ಹೊಂದಿರುವ ಇಂಡಸ್ ಬ್ಯಾಂಕಿಗೆ ಅತಿ ಹೆಚ್ಚಿನ ಅನಿವಾಸಿ ಭಾರತೀಯ ಠೇವಣಿ ಗಳು ಹಾಗೂ ಪ್ರತ್ಯೇಕ ನಿರ್ವಾಹಕ ತಂಡವೇ ಇದೆ. ಈ ತಂಡ ದವರೆಲ್ಲರೂ ಮಾಜಿ ಭಾರತೀಯ ಸ್ಟೇಟ್ ಬ್ಯಾಂಕ್ ಸಿಬ್ಬಂದಿ ವರ್ಗದವರು. ಟೈಮ್ಸ್ ಬ್ಯಾಂಕಿಗೆ ಬಳಕೆದಾರ ಬ್ಯಾಂಕಿಂಗ್ ವ್ಯವ ಹಾರದ ಜೊತೆಗೆ ಶೇ. 50ರಷ್ಟು ನಿಗಮ ವಲಯ ಗ್ರಾಹಕ ರಿದ್ದಾರೆ. ಸಿಬ್ಬಂದಿ ತರಬೇತಿ ಕಾರ್ಯಕ್ರಮ ಈ ಬ್ಯಾಂಕಿನ ವೈಶಿಷ್ಟ್ಯವಾಗಿದೆ. ಮೂಲವಾಗಿ ಇದರ ಪೋಷಕ ಸಂಸ್ಥೆ (ಟೈಮ್ಸ್ ಆಫ್ ಇಂಡಿಯಾ—ಬೆನೆಟ್ ಕೋಲ್‌ಮನ್) ಒಂದು ಪ್ರಮುಖ ಪತ್ರಿಕೋದ್ಯಮವಾದ್ದರಿಂದ ವ್ಯಾಪಕ ಹಾಗೂ ಲಾಭದಾಯಕ ಪ್ರಚಾರ ಮಾಡಲು ಅನುಕೂಲವಾಗಿದೆ. ಯುಟಿಐ ಬ್ಯಾಂಕಿಗೆ ಯೂನಿಟ್ ಆಧಾರಿತ ಸಾಲಗಳನ್ನು ಕೊಡಲು ಒಂದು ಒಳ್ಳೆ ಅವಕಾಶ. ಪೋಷಕ ಸಂಸ್ಥೆಯಲ್ಲಿ ಸುಮಾರು 36 ದಶಲಕ್ಷ ಯೂನಿಟ್‌ದಾರರಿದ್ದಾರೆ ಮತ್ತು 1 ಲಕ್ಷ ದಳ್ಳಾಳಿಗಳಿದ್ದಾರೆ.

"ಸೇವೆ-ಸೇವೆ-ಸೇವೆ-ಮಾತ್ರ" ಧ್ಯೇಯ

ಇವುಗಳ ದಾಯಾದಿಗಳೆನಿಸಿಕೊಂಡ ರಾಷ್ಟ್ರೀಕೃತ ಬ್ಯಾಂಕು ಗಳೊಂದಿಗೆ ಹೋಲಿಸಿ ನೋಡಿದರೆ, ಈ ನವೀನ ಬ್ಯಾಂಕುಗಳು ಸೇವೆಮಾಡುವಲ್ಲಿ ಹಾಗೂ ಸೇವಾ ಮನೋಭಾವದಲ್ಲಿ ತುಂಬಾ ಮುಂದಿವೆ. ಉಚ್ಚ ತಂತ್ರಜ್ಞಾನ ಆಧಾರಿತ ಬ್ಯಾಂಕಿಂಗ (Hitech Banking) ವರ್ಗಕ್ಕೆ ಸೇರಿದ ದೂರದರ್ಶನ ಬ್ಯಾಂಕಿಂಗ್, ಉಪಗ್ರಹ ಬ್ಯಾಂಕಿಂಗ್, ಆನ್-ದಿ-ಲೈನ್ ಬ್ಯಾಂಕಿಂಗ್ ಮೂಲಕ ಶೀಘ್ರಸೇವೆ ಸಾಧ್ಯವಾಗಿರುವುದಲ್ಲದೆ ಈ ಬ್ಯಾಂಕುಗಳು ವಿಶ್ವವ್ಯಾಪಿಯಾಗಲು ಅವಕಾಶವಾಗಿದೆ. ಓವರ್ ದಿ ಕೌಂಟರ್ ವಿನಿಮಯ ಸಂಸ್ಥೆ ಮತ್ತು ಐಸಿಐಸಿಐ ಬ್ಯಾಂಕ್ ಜಂಟಿ ವ್ಯವಹಾರ ದಿಂದ ಪೇಟೆ ಪಟುಗಳಿಗೆ (Market Players) ಹಲವಾರು ಉದರಿ ಸೌಲಭ್ಯಗಳನ್ನು ಒದಗಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕು ಗಳು ಉದರಿಪತ್ರ ನೀಡಲು ಹಲವಾರು ದಿನ ತೆಗೆದುಕೊಂಡರೆ, ಇಂಡಸ್ ಬ್ಯಾಂಕಿನಲ್ಲಿ ಅದು ಕೆಲವೇ ಘಂಟೆಗಳಲ್ಲಿ ಸಿದ್ಧ. ಈ ಬ್ಯಾಂಕುಗಳು ಸ್ವಯಂಚಲೀ ಸರಾಫ್ ಯಂತ್ರಗಳನ್ನು ಬಳಸು ತ್ತಿವೆ. ವಿದೇಶಿಯರನ್ನು ಆಕರ್ಷಿಸಲು ಸೈಬರ್ ಬಾಹ್ಯಾಕಾಶ ಪದ್ಧತಿಗೆ ಭಾಗಿಯಾಗಿವೆ. ಹಣ ರವಾನೆಗಾಗಿ 'ಇಂಟರ್‌ನೆಟ್' ಸೌಲಭ್ಯವನ್ನು ನೀಡುತ್ತಿವೆ. ಇದರ ಜೊತೆಗೆ ವಿದ್ಯುನ್ಮಾನ ಅಂಚೆ (E. Mail). ದೂರು, ಟೀಕೆಗಳಿಗಾಗಿ ವಿದ್ಯುನ್ಮಾನ ಅತಿಥಿ ಪುಸ್ತಕ (Electronic Guest Book) ಮುಂತಾದ ಮುಂದುವರಿದ ಸೌಲಭ್ಯಗಳನ್ನು ಕೊಡುತ್ತಿವೆ. ಟೈಮ್ಸ್ ಬ್ಯಾಂಕ್ ನಾಲ್ಕು ಮಹಾ ನಗರಗಳಲ್ಲಿ ಉಪಗ್ರಹ ಕಛೇರಿಗಳನ್ನು ಸ್ಥಾಪಿಸಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಸೆಂಚುರಿಯನ್ ಬ್ಯಾಂಕ್‌ಗಳು ತಲಾ 5 ಸ್ವಯಂಚಲೀ ಸರಾಫ್ ಯಂತ್ರಗಳನ್ನು ಬಳಸುತ್ತಿವೆ. ಐಸಿಐಸಿಐ ಬ್ಯಾಂಕು 10 ಯಂತ್ರಗಳ ಜೊತೆಗೆ 'ಸ್ವಿಫ್ಟ್' (SWIFT—ವಿಶ್ವ ವ್ಯಾಪಿ ಅಂತರಬ್ಯಾಂಕ್ ಹಣಕಾಸು ದೂರಸಂಪರ್ಕ ಸಂಘ) ಸಂಪರ್ಕವನ್ನು ಹೊಂದಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಟ್ಟು 33 ಯಂತ್ರಗಳಿವೆ. ಒಬ್ಬ ಬ್ಯಾಂಕ್ ಅಧಿಕಾರಿಯ ಪ್ರಕಾರ "ಕಿರಿದಾದ ಶಾಖಾಜಾಲದಿಂದಾಗಿ ಈ ಯಂತ್ರಗಳ ಸೇವೆ ನಮಗೆ ಪರೋಕ್ಷವಾಗಿ ಲಾಭ ತರುವ ಘಟಕಗಳಾಗಿವೆ ಮತ್ತು ಬ್ಯಾಂಕಿನ ಸಾಮಾನ್ಯ ವೆಚ್ಚದಡಿಯಲ್ಲಿ ಇದರ ವೆಚ್ಚವೂ ಸೇರಿದೆ." ಈಗ ಎರಡು ವರ್ಷಗಳ ಹಿಂದೆ ಪ್ರತಿದಿನ ಸುಮಾರು 50 ಎಟಿಎಂ ವ್ಯವಹಾರಗಳಿದ್ದುವು. ಈಗ ನೂರಕ್ಕೂ ಹೆಚ್ಚು ಎಟಿಎಂ ವ್ಯವಹಾರ ಗಳು ಜರುಗುತ್ತಿವೆ. ಕೆಲವು ಬ್ಯಾಂಕುಗಳು ಇವುಗಳನ್ನು ಪುಕ್ಕಟೆ ಯಾಗಿ ಕೊಡುತ್ತಿದ್ದರೆ, ಇನ್ನು ಕೆಲವು ಬ್ಯಾಂಕುಗಳು ಒಂದೇ ಬಾರಿಗೆ ಏಕಶುಲ್ಕವನ್ನು ಕಾರ್ಡ್ ವಿತರಿಸುವಾಗ ವಿಧಿಸುತ್ತಿವೆ. ಸೆಂಚುರಿಯನ್ ಬ್ಯಾಂಕ್ ಉಪಗ್ರಹ ಹಾಗೂ ವಿಸಾಟ್ (Very Small Apperture Terminal—VSAT) ವೆಚ್ಚವನ್ನು ಭರಿಸಲು ರೂ. 300 ಶುಲ್ಕವನ್ನು ವಿಧಿಸಿದೆ. "ಎಲ್ಲೆಲ್ಲೂ ಬ್ಯಾಂಕಿಂಗ್" ಸೌಕರ್ಯಪೂರ್ಣವಾದ ಬ್ಯಾಂಕಿಂಗ್ Anywhere Banking Convenience Banking) ಗುರಿಯ ಸಲು ವಾಗಿ ಈ ಬ್ಯಾಂಕು ಸುಮಾರು 8 ಕೋಟಿ ರೂಪಾಯಿಗಳಷ್ಟನ್ನು ಗಣಕೀಕರಣದ ಮೇಲೆ ವಿನಿಯೋಜಿಸಿದೆ.

ಬ್ಯಾಂಕುಗಳ ವ್ಯವಹಾರ ವ್ಯಾಪ್ತಿ

ಕ್ರಮಸಂಖ್ಯೆ	ಬ್ಯಾಂಕಿನ ಹೆಸರು	ಸ್ಥಾಪನೆ	ಪ್ರವರ್ತಕರು	ದೇಶ–ವಿದೇಶ ಸಂಬಂಧಗಳು	ಠೇವಣಿಗಳು	(ವೆಚ್ಚ %)	ಆಸ್ತಿ	ವರಮಾನ
							(ಕೋಟಿ ರೂಪಾಯಿಗಳಲ್ಲಿ)	
1	ಇಂಡಸ್ ಇಂಡ್	4–94	ಹಿಂದುಜ ಕುಟುಂಬ	ಕ್ರೆಡಿಟ್ ಬ್ಯಾಂಕ್ ಬ್ರುಸಲ್ಸ್ (ಬೆಲ್ಜಿಯಂ) ಹೈದರಾಬಾದ್ ಸ್ಟೇಟ್ ಬ್ಯಾಂಕ್ ವೈಶ್ಯ ಬ್ಯಾಂಕ್	1,412	9%	2,800	46
2	ಯೂಟಿಐ	4–94	ಪೋಷಕ ಯುಟಿಐ ಸಂಸ್ಥೆ		926	10%	1,512	12
3	ಐಸಿಐಸಿಐ	6–94	ಪೋಷಕ ಐಸಿಐಸಿಐ	ಸೌತ್ ಇಂಡಿಯಾ ಬ್ಯಾಂಕು, ಫೆಡರಲ್ ಮತ್ತು ಕ್ಯಾಥೊಲಿಕ್ ಸಿರಿಯನ್ ಬ್ಯಾಂಕು	728	10%	1,500	17
4	ಬ್ಯಾಂಕ್ ಆಫ್ ಪಂಜಾಬ್	8–94	ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮಾಜಿ ಮುಖ್ಯಸ್ಥರು, ಅಧಿಕಾರಿಗಳು		ದೊರೆತಿಲ್ಲ		508	14
5	ಗ್ಲೋಬಲ್ ಟ್ರಸ್ಟ್	11–94	ವೈಶ್ಯ ಬ್ಯಾಂಕಿನ ಮಾಜಿ ಮುಖ್ಯಸ್ಥ ರಮೇಶ್ ಗೆಲ್ಲಿ, ಏಷ್ಯ ಅಭಿವೃದ್ಧಿ ಬ್ಯಾಂಕಿನ ಮಾಜಿ ನಿರ್ದೇಶಕ ಜಯಂತ ಮಾಧವ	ಟಿ. ಎ. ಸಂಸ್ಥೆ, ಬರ್ಹಾರ್ಡ್, ಮಲೇಷಿಯ	1,324	9%	2,725	41
6	ಎಚ್‌ಡಿಎಫ್‌ಸಿ	1–95	ಪೋಷಕ ಎಚ್‌ಡಿಎಫ್‌ಸಿ	ನ್ಯಾಟ್‌ವೆಸ್ಟ್ (ಇಂಗ್ಲೆಂಡ್), ಮಾರಿಷಸ್, ವಿಜಯಾ ಬ್ಯಾಂಕು	690	10%	1,332	20
7	ಸೆಂಚುರಿಯನ್	1–95	20ನೇ ಶತಮಾನ ಹಣಕಾಸು ನಿಗಮ	ಕೆಪ್ಪೆಲ್ (ಸಿಂಗಾಪೂರ್), ಏಷ್ಯ ಅಭಿವೃದ್ಧಿ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಗಮ, ವಾಷಿಂಗ್‌ಟನ್	215	10.5	380	10
8	ಅಭಿವೃದ್ಧಿ ಉದರಿ	6–95	ಅಭಿವೃದ್ಧಿ ಸಹಕಾರಿ ಬ್ಯಾಂಕ್	ಆಗಾಖಾನ್ ನಿಧಿ ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ	689	ದೊರೆತಿಲ್ಲ		
9	ಟೈಮ್ಸ್	8–95	ಟೈಮ್ಸ್ ಆಫ್ ಇಂಡಿಯಾ (ಬೆನೆಟ್ ಕೋಲ್‌ಮನ್)	ಡಾಯಿಶ್‌ಬ್ಯಾಂಕ್ (ಜರ್ಮನಿ), ಹೈದರಾಬಾದ್ ಹಾಗೂ ಕೆನರಾ ಬ್ಯಾಂಕ್	356	7%	655	08
10	ಐಡಿಬಿಐ	11–95	ಪೋಷಕ ಐಡಿಬಿಐ	ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (ಸಿಡ್‌ಬಿ)	12	5%	130	01

(ಅಂಕಿ–ಅಂಶಗಳು : ಬಿಸಿನೆಸ್ ಇಂಡಿಯಾ, ಬಿಸಿನೆಸ್ ವರ್ಲ್ಡ್, ಎಕಾನಾಮಿಕ್ಸ್ ಟೈಮ್ಸ್, ಫೈನಾನ್‌ಷಿಯಲ್ ಎಕ್ಸ್‌ಪ್ರೆಸ್‌ನಿಂದ)

ಸಮಸ್ಯೆಗಳು

ಆರಂಭಿಕ ವೆಚ್ಚ ಪೂರ್ಣವಾಗಿ ಬಗೆಹರಿಯದ ಸಮಸ್ಯೆಯಾಗಿದೆ. ಶಾಖಾವಿಸ್ತರಣೆಯಿಂದ ಸಮಸ್ಯೆ ಮತ್ತಷ್ಟು ಜಟಿಲಗೊಂಡಿದೆ. ಇವುಗಳು ಅಗ್ಗದ ಚಿಲ್ಲರೆ ಠೇವಣಿ ಸಂಗ್ರಹಣೆಗೆ ಮೊರೆ ಹೊಗ ಬೇಕಾಗಿದೆ. ಎಂಎಸ್ ಶೂಸ್ ಹಗರಣದಿಂದಾಗಿ ಅಂತರನಿಗಮ ಠೇವಣಿಗಳು (ICD) ಆಕರ್ಷಣೆಯನ್ನು ಕಳೆದುಕೊಂಡಿದೆ. ಚಿಲ್ಲರೆ ಠೇವಣಿ ಸಂಗ್ರಹಣೆಯಲ್ಲೇ ನ್ಯೂನತೆಗಳಿವೆ. ಐಸಿಐಸಿಐ ಬ್ಯಾಂಕಿನಲ್ಲಿ ಖಾತೆ ತೆರೆಯಲು ಕನಿಷ್ಠ ಮೊತ್ತ ರೂ. 5000. ಇಂಡಸ್ ಬ್ಯಾಂಕ್ ಮತ್ತು ಯುಟಿಐ ಬ್ಯಾಂಕುಗಳಲ್ಲಿ ರೂ. 10.000. ಸೆಂಚುರಿಯನ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕುಗಳಲ್ಲಿ ರೂ. 5ರಿಂದ 10 ಸಾವಿರ ವಿಧಿಸಲಾಗಿದೆ. ಇಂಥ ಪದ್ಧತಿ ವಿದೇಶಿ ಬ್ಯಾಂಕುಗಳಲ್ಲಿ ಮಾತ್ರ ಇದೆ. ಇದರಿಂದಾಗಿ ನೂತನ ಬ್ಯಾಂಕುಗಳು ಶ್ರೀಸಾಮಾನ್ಯ ನಿಗೆ ಎಟುಕುವಂಥವಲ್ಲ.

ಈ ಬ್ಯಾಂಕುಗಳ ಶಾಖೆಗಳ ಸಂಖ್ಯೆ 70. ಇದೊಂದು ವಿಷಯ ದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಮುಂದಿವೆ. ನಗರಾಧಾರಿತವಾದ ಶಾಖಾಜಾಲ ಹೊಸ ಬ್ಯಾಂಕುಗಳಿಗೆ ಅನನುಕೂಲವೇ ಸರಿ. ವ್ಯಾಪಕಜಾಲದ ಗುರಿ ಇಟ್ಟುಕೊಂಡು ಗ್ರಾಮೀಣ ಪ್ರದೇಶಗಳಿಗೆ ಕಾಲಿಟ್ಟರೆ ಪ್ರಯೋಜನವಾಗದು. ಏಕೆಂದರೆ : (ಅ) ಈಗಾಗಲೇ ನಷ್ಟ ಅನುಭವಿಸುತ್ತಿರುವ ಬ್ಯಾಂಕುಗಳಿಗೇ ವ್ಯಾಪಾರವಿಲ್ಲದಿರು ವಾಗ ಇನ್ನು ನೂತನ ಬ್ಯಾಂಕುಗಳಿಗೇನು ಕೆಲಸ ಅಲ್ಲಿ ? (ಅ) ಅದೂ ಅಲ್ಲದೆ ವಿತ್ತಮಂತ್ರಿ ಚಿದಂಬರಂ ಪ್ರಕಾರ ಮೂರು ಜಿಲ್ಲೆ ಗೊಂದು ಸ್ಥಳೀಯ ಖಾಸಗಿ ಬ್ಯಾಂಕುಗಳ (Local area Banks) ಯೋಜನೆ ಸಧ್ಯದಲ್ಲೇ ಬರಲಿದೆ. ಇದರಿಂದಾಗಿ ಈ ಹೊಸ ಬ್ಯಾಂಕುಗಳ ಗ್ರಾಮೀಣ ಪ್ರವೇಶ ಫಲಕಾರಿ ಆಗದು. (ಇ) ಬ್ಯಾಂಕಿಂಗ್ ಮಿಂಚು—ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಹೊಸ ಅವತಾರ. 40,000 ಸಂಸ್ಥೆಗಳ ಪೈಕಿ 450 ಸಂಸ್ಥೆಗಳಂ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಾಯಿಸಿ ಅನಿಯಂತ್ರಿತ ಬಡ್ಡಿದರ ಆಳ್ವಿಕೆಗೆ ಒಳಪಟ್ಟು ಬಿರುಸಿನ ವ್ಯಾಪಾರ ಮಾಡಲು ಹೊರಟಿವೆ. ಇದರಿಂದ ವಿಶೇಷವಾಗಿ ಹೊಸ ಬ್ಯಾಂಕುಗಳ ಠೇವಣಿ ಸಂಗ್ರಹಣೆಗೆ ಸ್ಪರ್ಧೆ ತೀವ್ರವಾಗಬಹುದು. ಈ ಸಂಸ್ಥೆಗಳು ಆಕರ್ಷಕವಾದ ಬಡ್ಡಿದರ ನೀಡಿ ಠೇವಣಿ ಗಳಿಸಿಕೊಂಡರೆ ನಿಧಿ ಸಂಪನ್ಮೂಲಗಳು ಬ್ಯಾಂಕಿಂಗ್ ಚೌಕಟ್ಟಿನಿಂದ ನಿರ್ಗಮಿಸಬಹುದು.

ಖಾಸಗಿ ಬ್ಯಾಂಕುಗಳ ಸ್ಥಾಪನೆಗಾಗಿ ರಿಸರ್ವ್ ಬ್ಯಾಂಕ್ ನೀಡಿದ ಮಾರ್ಗಸೂಚಿಯಲ್ಲಿ ಆದ್ಯತಾವಲಯಕ್ಕೆ ಸಾಲ ನೀಡಿಕೆ ಕಡ್ಡಾಯ ಎಂದು ಸ್ಪಷ್ಟಪಡಿಸಲಾಗಿತ್ತು. ಇದನ್ನು ಪಾಲಿಸದ ಬ್ಯಾಂಕು ಆ ವಿಫಲು ಹಣದಲ್ಲಿ ಶೇ. 50ರಷ್ಟು ನಬಾರ್ಡ್, ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಹಾಗೂ ಖಾದಿಗ್ರಾಮೋದ್ಯೋಗ ಆಯೋಗದ ಬಾಂಡುಗಳಲ್ಲಿ (ಶೇ. 8 ಬಡ್ಡಿ) ತೊಡಗಿಸಬೇಕು. ಇದೇ ಹಣ ಸಾಲವಾಗಿ ನೀಡಿದಲ್ಲಿ ಶೇ. 15ರಷ್ಟು ಬಡ್ಡಿ ದುಡಿಯುತ್ತಿತ್ತು. ಅಂದರೆ 5–7% ನಷ್ಟ ಭರಿಸಬೇಕಾಗುವುದು. "ಶೇ. 40ರಷ್ಟು ಆದ್ಯತಾವಲಯ ಮಾನಕ ಹೊಸ ಬ್ಯಾಂಕುಗಳಿಗೆ ಹೇರಿರುವುದು ಸರಿಯಲ್ಲ" ಎಂದು ಬ್ಯಾಂಕುಗಳ ಮುಖ್ಯಸ್ಥರು ಆಕ್ಷೇಪಿಸಿರುತ್ತಾರೆ.

ಇವುಗಳ ಹುಟ್ಟು ಪೋಷಣೆ ರೀತಿ ನೀತಿಗಳನ್ನು ಗಮನಿಸಿದರೆ, ವ್ಯಾಪಾರ ವ್ಯವಹಾರಗಳು ಸ್ಥಗಿತಗೊಂಡರೂ ಸರಿ, ಏನೇ ನಷ್ಟ ವಾದರೂ ಸರಿ ಅದನ್ನು ಭರಿಸುವ ತಾಕತ್ತು ಈ ಗಟ್ಟಿಗ ಬಾಂಕು ಗಳಿಗಿದೆ. ಒಳ್ಳೆಯ ಯೋಜನೆಗಳನ್ನು ಹಮ್ಮಿಕೊಂಡು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತಷ್ಟು ಸಡಿಲೀಕರಣ ಮತ್ತು ಬಂಡವಾಳ ಪೇಟೆ ಯಲ್ಲಿ ಸುಧಾರಣೆಗಳನ್ನು ನಿರೀಕ್ಷಿಸುತ್ತಿವೆ. ನಾಡಿನಲ್ಲಿ ಕೃಷಿ ಮತ್ತು ಸಣ್ಣ ಕೈಗಾರಿಕೆಗೆ ಆದ್ಯತೆ ಇರುವುದನ್ನು ಗಮನಿಸಿ ಈ ನೂತನ ಬ್ಯಾಂಕುಗಳು ಫಲಪುಷ್ಪ ತೋಟಗಾರಿಕೆ. ಅಣಬೆ ಕೃಷಿ ಮುಂತಾದ ಉನ್ನತ ತಂತ್ರಜ್ಞಾನ ಆಧಾರಿತ ಕೃಷಿ ಚಟುವಟಿಕೆ ಗಳಲ್ಲಿ (Hitech Agriculture) ಆಸಕ್ತಿ ತೋರುತ್ತಿವೆ. ಕೆಲವು ಕೇಂದ್ರ ಡಿಪಾಸಿಟರಿ ಯೋಜನೆ ಮತ್ತು ಅಭಿರಕ್ಷಣ ಸೇವೆಗೆ ಪ್ರವೇಶಿಸಿವೆ. ಕೆಲವು ಪರಸ್ಪರ ಹಣ ನಿಧಿಯೋಜನೆಗೆ ಕೈಹಾಕಿವೆ. ಐಡಿಬಿಐ ಬ್ಯಾಂಕು ಮತ್ತು ಟೈಮ್ಸ್ ಬ್ಯಾಂಕು 1997ರ ಅರ್ಧ ವರ್ಷದ ಅವಧಿಯಲ್ಲಿ ತಲಾ 150 ಕೋಟಿ ಮತ್ತು 250 ಕೋಟಿ ಮೆಗಾ ಕಲಾಪಗಳ ಮೂಲಕ ಬಂಡವಾಳ ಪೇಟೆಯನ್ನು ಪ್ರವೇಶಿಸ ಲಿವೆ. ಹೀಗೆ ಪ್ರತಿಯೊಂದು ಹೊಸ ಬ್ಯಾಂಕು ಉಜ್ವಲ ಭವಿಷ್ಯ ವನ್ನು ರೂಪಿಸಿಕೊಳ್ಳುತ್ತಿದೆ. ಇವುಗಳ ಹಂತಹಂತವಾದ ಪ್ರಗತಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹಂತಹಂತವಾಗಿ ಇಳಿಮುಖ. ಆಕಾರ ದಲ್ಲಿ ದೊಡ್ಡವೇ ಹೊರತು ಸೇವೆಯಲ್ಲಿ ಖಾಸಗೀ ಬ್ಯಾಂಕುಗಳಿ ಗಿಂತ ಬಹಳ ದೂರವಿದೆ. ✱

ಬ್ಯಾಂಕಿಂಗ್ ಪ್ರಪಂಚ; ಸೆಪ್ಟೆಂಬರ್ 1996
2

ಸ್ಥಳೀಯ ಕ್ಷೇತ್ರ ಬ್ಯಾಂಕುಗಳು

ಬಿ. ಎಸ್. ಚಂದ್ರಶೇಖರ

ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ಚಿತ್ರದುರ್ಗ

ಒಂದು ಕಡೆ ಖಾಸಗಿ ವಲಯದ ಹೊಸಹೊಸ ಬ್ಯಾಂಕುಗಳು, ಇನ್ನೊಂದು ಕಡೆ ವಿದೇಶೀ ಬ್ಯಾಂಕುಗಳು. ನವೋನವ ಉಪಕರಣಗಳೊಂದಿಗೆ, ಹೊಚ್ಚ ಹೊಸ ಉತ್ಪನ್ನಗಳನ್ನು ಹಿಡಿದು ದಿಬ್ಬಣ ಹೊರಟಿರುವ ಈ ಬ್ಯಾಂಕುಗಳ ಭರಾಟೆಯನ್ನೆದುರಿಸಲಾರದೆ ತತ್ತರಿಸುವಂತಾಗಿರುವ ಬೃಹತ್ ಸರ್ಕಾರಿ ಬ್ಯಾಂಕುಗಳೂ, ಬಲರಾಮನ ಗೋವುಗಳಂತಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಈಗ ಇನ್ನೊಂದು ಬಗೆಯ ವೈಯಾರಿಗಳೊಂದಿಗೆ ಸ್ಪರ್ಧೆ ನಡಸಬೇಕಾಗಿದೆ. ಅವು ಸ್ಥಳೀಯ ಕ್ಷೇತ್ರ ಬ್ಯಾಂಕುಗಳು!

ಈಚೆಗೆ ಭಾರತದ ರಿಸರ್ವ್ ಬ್ಯಾಂಕ್ ಸ್ಥಳೀಯ ಕ್ಷೇತ್ರ ಬ್ಯಾಂಕುಗಳನ್ನು ಕುರಿತು ನಿರ್ದೇಶಗಳನ್ನು ಹೊರಡಿಸಿರುವುದರಿಂದ ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇನ್ನೊಂದು ಸ್ತರದ ಸಂಸ್ಥೆಗಳು ಸೇರ್ಪಡೆಯಾಗುವುದು ಖಚಿತಗೊಂಡಂತಾಗಿದೆ. ವಾಣಿಜ್ಯ ಕ್ಷೇತ್ರದ ಬ್ಯಾಂಕುಗಳು, ಸಹಕಾರಿ ಕ್ಷೇತ್ರದ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ತಮ್ಮ ಹೊಸ ಜತೆಗಾರ ಬ್ಯಾಂಕುಗಳನ್ನು ಹೇಗೆ ಸ್ವಾಗತಿಸುತ್ತವೋ ?

ಗ್ರಾಮೀಣ ಉದರಿ ಭಾರತದ ಒಂದು ಪ್ರಮುಖ ಸಮಸ್ಯೆ. ಇದನ್ನು ಬಗೆಹರಿಸಲು ಸರಕಾರ ಮಾಡಿದ ಪ್ರಯೋಗಗಳು ಅನೇಕ. ಬ್ಯಾಂಕ್ ರಾಷ್ಟ್ರೀಕರಣ, ಗ್ರಾಮೀಣ ಬ್ಯಾಂಕ್ ಶಾಖೆಗಳ ಸಂಖ್ಯೆಯಲ್ಲಿ ಹೆಚ್ಚಳ, ಸಹಕಾರಿ ಕ್ಷೇತ್ರದ ಬ್ಯಾಂಕುಗಳ ಮೂಲಕ ಉದರಿ, ಪ್ರಾಥಮಿಕ ಕೃಷಿ ಸಹಕಾರಿ ಸಂಸ್ಥೆಗಳ ಮೂಲಕ ಕೃಷಿಕರಿಗೆ ಬ್ಯಾಂಕ್ ಉದರಿಯ ಹರಿವು, ವಿಶೇಷವಾಗಿ ಗ್ರಾಮೀಣ ಅಭಿವೃದ್ಧಿಗಾಗಿಯೇ ಮೀಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ, ಗ್ರಾಮೀಣ ಅಭಿವೃದ್ಧಿಗೆ ಸಹಾಯಧನ ನೀಡುವ ವಿಶೇಷ ಯೋಜನೆಗಳು, ಸಾಲ-ಬಡ್ಡಿ ಮನ್ನಾ ಮುಂತಾದ ಪರಿಹಾರಗಳು, ಉದರಿ ನೀಡಿಕೆಯಲ್ಲಿ ಸಮರ್ಪಕತೆ ಸಾಧಿಸಲು ಸೇವಾಕ್ಷೇತ್ರ ಅನುಗಮನ—ಒಂದೇ, ಎರಡೇ ? ಇಷ್ಟಾದರೂ ಇಂದಿಗೂ ಗ್ರಾಮೀಣ ಜನರು ಬ್ಯಾಂಕ್ ಸೌಲಭ್ಯದಿಂದ ವಂಚಿತರಾಗಿಲ್ಲವೆಂದು ಧೈರ್ಯವಾಗಿ ಹೇಳುವಂತಿಲ್ಲ. ಹಾಗೇ ಗ್ರಾಮೀಣ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ ಎಂದೂ ಭಾವಿಸುವಂತಿಲ್ಲ. ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ಗಮನಿಸಿದಾಗ ಕೃಷಿಗೆ, ಗ್ರಾಮಾಭಿವೃದ್ಧಿಗೆ ಗಮನ ಸಂದಿದೆಯೆಂಬುದು ಸ್ಪಷ್ಟವಾದರೂ ಆಗಿರುವ ಕೆಲಸ ಏನೇನೂ ಸಾಲದು. ಬಹುತೇಕ ಗ್ರಾಮಸ್ಥರಿಗೆ ಇನ್ನೂ ಬ್ಯಾಂಕ್ ಶಾಖೆಗಳು ತೆರೆದುಕೊಂಡಂತಿಲ್ಲ. ಹಿಂದೆ ಖಾಸಗಿ ಸಾಲಿಗರ ಕಪಿಮುಷ್ಟಿಗಳಿಗೆ ಸಿಲುಕಿದ್ದ ರೈತರು ಈಗಲೂ ಅದೇ ಸ್ಥಿತಿಯಲ್ಲಿರುವುದು ಶೋಚನೀಯ.

ಇದೀಗ ಆರಂಭವಾಗಲಿರುವ ಹೊಸ ರೀತಿಯ ಬ್ಯಾಂಕುಗಳು ಗ್ರಾಮೀಣ ಉದರಿ ಪೂರೈಕೆಯಲ್ಲಿ ವ್ಯಾಪಕತೆಯನ್ನೂ ಸಮರ್ಪಕತೆಯನ್ನೂ ಸಾಧಿಸುವ ಉದ್ದೇಶ ಹೊಂದಿರುತ್ತವೆ. ಖಾಸಗಿ ವಲಯಕ್ಕೆ ಸೇರಿರುವ ಈ ಬ್ಯಾಂಕುಗಳ ಬಂಡವಾಳ ತಲಾ ರೂ. 5 ಕೋಟಿಯಷ್ಟು ಇದ್ದರೆ ಸಾಕು. ವ್ಯಕ್ತಿ, ಪಾಲುದಾರಿಕೆ ಸಂಸ್ಥೆ, ನ್ಯಾಸ ಸಂಸ್ಥೆ ಹೀಗೆ ಯಾರು ಬೇಕಾದರೂ ಈ ಬ್ಯಾಂಕನ್ನು ಸ್ಥಾಪಿಸಲು ಅವಕಾಶವಿದೆ. ಅಕ್ಕಪಕ್ಕದ ಮೂರು ಜಿಲ್ಲೆಗಳ ಗುಚ್ಛ ಈ ಒಂದೊಂದೂ ಬ್ಯಾಂಕಿನ ಕಾರ್ಯಕ್ಷೇತ್ರ. ಬ್ಯಾಂಕಿನ ಕೇಂದ್ರ ಕಚೇರಿ ಆ ಮೂರು ಜಿಲ್ಲೆಗಳ ಯಾವುದಾದರೊಂದು ಸ್ಥಳದಲ್ಲಿರಬಹುದು. ಅಗತ್ಯಕ್ಕೆ ತಕ್ಕಷ್ಟು ಶಾಖೆಗಳಿಗೂ ಅವಕಾಶವಿರುತ್ತದೆ.

ರಿಸರ್ವ್ ಬ್ಯಾಂಕಿನ ನಿಯಂತ್ರಣ

ಈ ಹೊಸ ಬ್ಯಾಂಕುಗಳು ಸಹಜವಾಗಿಯೇ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಡುತ್ತವೆ. ಶಾಖಾ ವಿಸ್ತರಣ ನೀತಿ ಇತರ ಬ್ಯಾಂಕುಗಳಿಗೆ ಅನ್ವಯವಾಗುವ ಹಾಗೆ ಇದಕ್ಕೂ ಅನ್ವಯವಾಗುವುದಲ್ಲದೆ, ಆದ್ಯತಾ ವಲಯ ಮುಂಗಡಗಳ ಪ್ರಮಾಣ ಒಟ್ಟು ಮುಂಗಡದ ಶೇ. 40ರಷ್ಟು—ಅದರಲ್ಲಿ ಶೇ. 25ರಷ್ಟು ದುರ್ಬಲ ವರ್ಗಗಳಿಗೆ—ಹೀಗೆ ಗುರಿಗಳನ್ನೂ ಸಾಧಿಸಬೇಕಾಗುತ್ತದೆ. ಇತರ ಬ್ಯಾಂಕುಗಳಿಗೆ ಅನ್ವಯವಾಗುವ ಬಂಡವಾಳ ಪರ್ಯಾಪ್ತತೆಯ ನಿಯಮವೂ ಇದಕ್ಕೆ ಅನ್ವಯವಾಗಲಿದೆ. ತನ್ನ ನಷ್ಟಸಂಭಾವ್ಯತಾ ಭರಿತ ಆಸ್ತಿಗಳ ಕನಿಷ್ಠ ಶೇ. 8ರಷ್ಟು ಬಂಡವಾಳವನ್ನು ಈ ಬ್ಯಾಂಕುಗಳು ಹೊಂದಿರಬೇಕು. ನಗದು ಮೀಸಲು ಅನುಪಾತ, ಪರಿನಿಯತ

ದ್ರವತ್ವ ಅನುಪಾತ ಮುಂತಾದ ನಿಬಂಧನೆಗಳನ್ನಂತೂ ನಿರೀಕ್ಷಿಸ ಲೇಬೇಕು. ಹೀಗೆ ಸ್ಥಳೀಯ ಕ್ಷೇತ್ರ ಬ್ಯಾಂಕುಗಳು ರಿಸರ್ವ್ ಬ್ಯಾಂಕಿನ ಪೂರ್ಣ ಹತೋಟಿಗೆ ಒಳಪಟ್ಟಿರುತ್ತವೆ.

ಕಾರ್ಯವಿಧಾನ

ಈ ಹೊಸ ಬ್ಯಾಂಕುಗಳ ಕಾರ್ಯವಿಧಾನ ಹೇಗೆ? ಇತರ ಬ್ಯಾಂಕುಗಳಿಗೂ ಇವುಗಳಿಗೂ ವ್ಯತ್ಯಾಸಗಳೇನಾದರೂ ಉಂಟೆ? ಕಾರ್ಯಕ್ಷೇತ್ರದ ಪರಿಮಿತಿಯಂತೂ ಇದ್ದೇ ಇದೆ—ಮೂರು ಅಕ್ಕ ಪಕ್ಕದ ಜಿಲ್ಲೆಗಳಿಗೆ ಮಾತ್ರ ಅದು ಸೀಮಿತ. ಠೇವಣಿಗಳ ಸಂಗ್ರಹಣೆ, ಕೃಷಿ ಚಟುವಟಿಕೆಗಳಿಗೆ ಉದರಿ, ಸಣ್ಣ ವ್ಯಾಪಾರ, ಸೇವೆ ಹಾಗೂ ಸಣ್ಣ ಕೈಗಾರಿಕೆಗಳಿಗೆ ಉದರಿ. ಸ್ವಯಂ ಉದ್ಯೋಗ ಯೋಜನೆಗಳಿಗೆ ನೆರವು, ಕೋಳಿಸಾಕಣೆ, ಪಶುಪಾಲನೆ, ರೇಷ್ಮೆ, ಮೀನುಗಾರಿಕೆ ಮತ್ತಿತರ ಚಟುವಟಿಕೆಗಳಿಗೆ ಧನಪೋಷಣೆ, ಡ್ರಾಫ್ಟುಗಳ ನೀಡಿಕೆ, ಚೆಕ್ಕುಗಳ ವಸೂಲಾತಿ—ಹೀಗೆ ವಾಣಿಜ್ಯ ಬ್ಯಾಂಕಂಗಳು ಮಾಡುವ ಎಲ್ಲಾ ಕಾರ್ಯಗಳನ್ನು ಈ ಹೊಸ ಬ್ಯಾಂಕುಗಳು ಮಾಡಬಹುದು ಎಂದು ಸೂಚಿಸಲಾಗಿದೆ. ಮುಂದೆ ರಿಸರ್ವ್ ಬ್ಯಾಂಕ್ ಈ ಕುರಿತು ಇನ್ನಷ್ಟು ಮಾರ್ಗದರ್ಶಕ ಸೂಚನೆಗಳನ್ನು ನೀಡುವ ನಿರೀಕ್ಷೆಯಿದೆ.

ಸದ್ಯಕ್ಕೆ ಹೇಳುವುದಾದರೆ ವಿದೇಶಿ ವಿನಿಮಯ ವ್ಯವಹಾರಗಳು. ವಿದೇಶ ವ್ಯಾಪಾರಕ್ಕೆ ಧನಪೋಷಣೆ ಹಾಗೂ ಬೃಹತ್ ವ್ಯಾಪಾರ ಅಥವಾ ಉದ್ಯಮಗಳಿಗೆ ನೆರವು ನೀಡುವುದನ್ನುಳಿದು ಇತರ ಎಲ್ಲ ರೀತಿಯ ಕಾರ್ಯಗಳನ್ನು ಸ್ಥಳೀಯ ಕ್ಷೇತ್ರ ಬ್ಯಾಂಕುಗಳು ಮಾಡ ಬಹುದು.

ಮುಂದೇನು?

ಇದೇನೋ ಸರಿಯೇ. ಆದರೆ ಹೊಸ ಬ್ಯಾಂಕುಗಳ ಪ್ರವೇಶದ ಪರಿಣಾಮವನ್ನು ಕುರಿತು ಯೋಚಿಸಬೇಡವೆ? ನಮ್ಮ ವಾಣಿಜ್ಯ ಬ್ಯಾಂಕುಗಳ ಸ್ಥಿತಿ ಹೇಳಿಕೊಳ್ಳುವಷ್ಟು ಚೆನ್ನಾಗೇನೂ ಇಲ್ಲ. ಕೆಲವು ಬ್ಯಾಂಕುಗಳಂತೂ ತೀರಾ ದುಃಸ್ಥಿತಿಯಲ್ಲಿವೆ. ನಿಷ್ಕ್ರಿಯ ಆಸ್ತಿಗಳ ಮಟ್ಟವನ್ನು ಮಿತಿಗೊಳಿಸಲು ಬ್ಯಾಂಕುಗಳು ಹೆಣಗುತ್ತಿವೆ. ಗಣಕೀ ಕರಣದ ವೆಚ್ಚ, ಸಿಬ್ಬಂದಿ ವೆಚ್ಚ, ಠೇವಣಿಗಳ ವೆಚ್ಚಗಳ ಮೇಲೆ ಹತೋಟಿ ಸಾಧಿಸಲು ಅವಕ್ಕೆ ತೀರಾ ಕಷ್ಟವೆನಿಸುತ್ತಿದೆ. ಠೇವಣಿ ಗಳ ಸಂಗ್ರಹಣೆಯಲ್ಲಂತೂ ಪೈಪೋಟಿ ಮಿತಿಮೀರಿದೆ. ಬಡ್ಡಿದರ ಗಳ ಮೇಲಿನ ಗರಿಷ್ಠ ಮಿತಿಯನ್ನು ರಿಸರ್ವ್ ಬ್ಯಾಂಕ್ ತೊಡೆದು ಹಾಕಿದೆಯಾದರೂ ಠೇವಣಿಗಳ ಮೇಲೆ ಅಧಿಕ ಬಡ್ಡಿ ನೀಡುವುದು ಬ್ಯಾಂಕುಗಳಿಗೆ ಕಠಿಣವಾಗಿದೆ. ಠೇವಣಿಗಳಿಗೆ ಅಧಿಕ ಬಡ್ಡಿ ನೀಡಿದರೆ ಮುಂಗಡಗಳ ಮೇಲೆ ಬಡ್ಡಿ ಹೊರೆ ಅಧಿಕವಾಗುವುದು ಅನಿ ವಾರ್ಯವಾಗುತ್ತದೆ. ಈವರೆಗೆ ತಮ್ಮ ಹಣಕಾಸು ಸಂಪನ್ಮೂಲ ಗಳಿಗೆ ಬ್ಯಾಂಕುಗಳನ್ನಷ್ಟೇ ಅವಲಂಬಿಸುತ್ತಿದ್ದ ಕಂಪನಿ ಗ್ರಾಹಕರು ಗಳು ಈಚೆಗೆ ಸಾರ್ವಜನಿಕರಿಂದ ನೇರವಾಗಿ ಠೇವಣಿಗಳನ್ನು ಪಡೆ ಯುವುದು ಹೆಚ್ಚಾಗಿದೆ. ಷೇರು ಬಂಡವಾಳ ಹೆಚ್ಚಿಸುವುದರ ಮೂಲಕ, ಡಿಬೆಂಚರುಗಳ ನೀಡಿಕೆ ಮೂಲಕವೂ ಅವು ತಮ್ಮ ಸಂಪನ್ಮೂಲಗಳನ್ನು ಬಲಗೊಳಿಸಿಕೊಳ್ಳುತ್ತಿವೆ. ಹೀಗಾಗಿ ಬ್ಯಾಂಕು ಗಳ ಮಧ್ಯಸ್ಥಗಾರಿಕೆಗೆ ತೀವ್ರ ಚ್ಯುತಿ ಉಂಟಾಗಿದೆ. ಆ ಬಹುತೇಕ ಬ್ಯಾಂಕುಗಳು ಸಾಲ ನೀಡಲು ಸಾಕಷ್ಟು ಸಂಪನ್ಮೂಲಗಳಿದ್ದರೂ ಅವು ಕರಡಾಗುವ ಭೀತಿಯಿಂದ ಹೆಚ್ಚಿನ ಸಾಲನೀಡಿಕೆಗೆ ಮುಂದಾ ಗುತ್ತಿಲ್ಲ. ಒಳ್ಳೆಯ ಕಂಪನಿ ಗ್ರಾಹಕರು ಬ್ಯಾಂಕುಗಳನ್ನು ಅವಲಂಬಿ ಸುವುದು ಕಡಿಮೆಯಾಗುತ್ತಿರುವುದರಿಂದ ಬ್ಯಾಂಕ್ ಸಾಲಗಳಿಗಾಗಿ ಮುಂದೆ ಬರುವವರನ್ನೆಲ್ಲ ಆದರಿಸಿ ಅವರಿಗೆ ಸಾಲ ನೀಡುವುದರಲ್ಲಿ ಬ್ಯಾಂಕುಗಳಿಗೆ ಅಷ್ಟು ಉತ್ಸಾಹವಿಲ್ಲ. ಸಾಲಗಳು ನಿಷ್ಕ್ರಿಯ ಆಸ್ತಿ ಗಳಾದರೆ ಅವುಗಳಿಗೆ ಉಪಬಂಧ ಮಾಡಬೇಕಾಗಿರುವುದರಿಂದ ಈಗಾಗಲೇ ಅಷ್ಟೇನೂ ಸುಸ್ಥಿತಿಯಲ್ಲಿರದ ತಮ್ಮ ಲಾಭದ ಆಸ್ತಿ ಗಳಿಗೆ ಧಕ್ಕೆಯನ್ನುಂಟುಮಾಡಿಕೊಳ್ಳಲು ಬ್ಯಾಂಕುಗಳು ತಯಾರಿಲ್ಲ.

ವಿದೇಶೀ ಬ್ಯಾಂಕುಗಳಿಂದ ತೀವ್ರಸ್ಪರ್ಧೆ ಉಂಟಾಗಿದೆ. ಮುಖ್ಯ ವಾಗಿ ಇವು ವಿದೇಶಿ ವ್ಯವಹಾರ ವಹಿವಾಟುಗಳ ವಿಷಯದಲ್ಲಿ ಹೆಚ್ಚಿನ ಪೈಪೋಟಿ ನೀಡುತ್ತಿವೆ. ಜತೆಗೆ ದೊಡ್ಡ ಸಾಲಗಾರ ಕಂಪನಿ ಗಳ ವ್ಯವಹಾರವನ್ನು ಅವು ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಿರು ವುದು ನಮ್ಮ ಬ್ಯಾಂಕುಗಳಿಗೆ ಸವಾಲಾಗತೊಡಗಿದೆ. ಖಾಸಗಿ ಕ್ಷೇತ್ರ ದಲ್ಲಿ ಪದಾರ್ಪಣ ಮಾಡಿ ಇದೀಗ ನೆಲೆಗೊಳ್ಳುತ್ತಿರುವ ಖಾಸಗಿ ಬ್ಯಾಂಕುಗಳಿಂದಲೂ ಇಂಥದೇ ಸ್ಪರ್ಧೆ ಉಂಟಾಗಿದೆ. ವಿದೇಶೀ ಬ್ಯಾಂಕುಗಳು ಹಾಗೂ ಖಾಸಗೀಕ್ಷೇತ್ರದ ಹೊಸ ಬ್ಯಾಂಕುಗಳು ಸರಕಾರಿ ಕ್ಷೇತ್ರದ ಬ್ಯಾಂಕುಗಳಿಗಿಂತ ಹಲವು ಸಂಗತಿಗಳಲ್ಲಿ ಮೇಲುಗೈ ಪಡೆದಿವೆ. ಅವುಗಳ ನಿಷ್ಕ್ರಿಯ ಆಸ್ತಿಗಳ ಪ್ರಮಾಣ ಇಲ್ಲವೆನ್ನುವಷ್ಟು ಕಡಿಮೆ. ಒಂದೆರಡೇ ಶಾಖೆಗಳು, ಸೀಮಿತ ಸಂಖ್ಯೆಯ ದೊಡ್ಡ ಗ್ರಾಹಕರು, ಸಂಪೂರ್ಣ ಗಣಕೀಕರಣದ ಸೌಲಭ್ಯ, ಅತ್ಯಲ್ಪ ಸಿಬ್ಬಂದಿ ವೆಚ್ಚ—ಇಂಥ ಅನೇಕ ಸೌಲಭ್ಯಗಳನ್ನು ಹೊಂದಿರುವ ಹೊಸ ಖಾಸಗಿ ಬ್ಯಾಂಕುಗಳು ಹಾಗೂ ವಿದೇಶೀ ಬ್ಯಾಂಕುಗಳ ಮುಂದೆ ಸರಕಾರಿ ಕ್ಷೇತ್ರದ ಹಾಗೂ ಇತರ ವಾಣಿಜ್ಯ ಬ್ಯಾಂಕುಗಳು ದಿಕ್ಕುಗೆಟ್ಟು ನಿಲ್ಲುವಂತಾಗಿದೆ. ಕೆಲವು ಬ್ಯಾಂಕುಗಳು ಅತಿ ಹೆಚ್ಚಿನ ನಷ್ಟ ಅನುಭವಿಸಿ ಅಪಾಯದ ಅಂಚಿಗೆ ಸರಿದಿವೆ. ಸುಸ್ಥಿತಿಯಲ್ಲಿರುವಂತೆ ಕಂಡುಬರುವ ಕೆಲವು ಬ್ಯಾಂಕುಗಳಿಗೂ ಮುಂದಿನ ಎರಡು ಮೂರು ವರ್ಷಗಳಲ್ಲಿ ಏನಾಗುವುದೆಂದು ಹೇಳ ಲಾಗುವುದಿಲ್ಲ.

ಗ್ರಾಮೀಣ ಬ್ಯಾಂಕುಗಳ ಪರಿಸ್ಥಿತಿ

ಇನ್ನು ಗ್ರಾಮೀಣ ಬ್ಯಾಂಕುಗಳ ಸಂಗತಿಯನ್ನು ಊಹಿಸಿ ಕೊಳ್ಳುವುದು ಕಷ್ಟವಲ್ಲ. ಅವು ಮೊದಲಿನಿಂದಲೂ ಕಷ್ಟಕ್ಕೆ ಸಿಲುಕಿ ಕೊಂಡವೇ. ಮಿತಿಮೀರಿದ ಸಿಬ್ಬಂದಿ ಖರ್ಚು ಹಾಗೂ ಮೇಲ್ಪ ಚರ್ಚುಗಳು, ಸಂಪನ್ಮೂಲಗಳ ಕೊರತೆ, ಕರಡುಸಾಲಗಳ ಹೊರೆ ಮುಂತಾದ ಸಮಸ್ಯೆಗಳಿಂದ ಬಹುತೇಕ ಗ್ರಾಮೀಣ ಬ್ಯಾಂಕುಗಳ ಬಂಡವಾಳವೇ ಕೊಚ್ಚಿಹೋಗಿದೆ. ಗ್ರಾಮೀಣ ಬ್ಯಾಂಕುಗಳ

ಬಂಡವಾಳ ವೃದ್ಧಿಸಲು ಕೇಂದ್ರ ಸರಕಾರ ಹಾಕಿಕೊಂಡ ಯೋಜನೆ ಸಫಲವಾಗಿಲ್ಲ. ಕೇಂದ್ರವು ಲಾಭದಲ್ಲಿರುವ ಗ್ರಾಮೀಣ ಬ್ಯಾಂಕುಗಳಿಗಷ್ಟೆ ನೆರವು ನೀಡಿದೆ ಎಂದು ಗ್ರಾಮೀಣ ಬ್ಯಾಂಕುಗಳ ದೂರು. ಇಷ್ಟಕ್ಕೂ ಎಲ್ಲ ಬ್ಯಾಂಕುಗಳಿಗೂ ಬಂಡವಾಳ ಬೆಂಬಲ ನೀಡುವುದು ಕೇಂದ್ರಕ್ಕೆ ಸುಲಭವೇನಲ್ಲ ! ಕೆಲವು ಗ್ರಾಮೀಣ ಬ್ಯಾಂಕುಗಳನ್ನು ಸುಧಾರಿಸುವುದು ಊಹೆಗೂ ನಿಲುಕದ ವಿಷಯವೆನಿಸಿದೆ. ಒಟ್ಟಾರೆ ಸಾಲ ನೀಡಲು ಅಶಕ್ತವಾಗಿರುವ ಗ್ರಾಮೀಣ ಬ್ಯಾಂಕುಗಳೇ ಹೆಚ್ಚಾಗಿರುವುದರಿಂದ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯ ಉದ್ದೇಶ ಸಂಪೂರ್ಣವಾಗಿ ವಿಫಲವೇ ಆಗಿದೆಯೆನ್ನಬೇಕು. ಗ್ರಾಮೀಣ ಹಿನ್ನೆಲೆಯ ಸಿಬ್ಬಂದಿಯನ್ನು ಅಲ್ಪ ವೆಚ್ಚದಲ್ಲಿ ಪಡೆದುಕೊಂಡು ವಾಣಿಜ್ಯ ಬ್ಯಾಂಕುಗಳ ವ್ಯವಸ್ಥಾಪನ ಕೌಶಲವನ್ನು ಬಳಸಿಕೊಂಡು ಗ್ರಾಮೀಣಕ್ಷೇತ್ರದಲ್ಲಿ ಉದರಿ ಸೌಲಭ್ಯಗಳನ್ನು ವ್ಯಾಪಕವಾಗಿ ನೀಡಲು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಗಿತ್ತು. ಆದರೆ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀತಿಯಂತೆ ವಾಣಿಜ್ಯ ಬ್ಯಾಂಕುಗಳಿಗೆ ನೀಡುವ ವೇತನವನ್ನೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸಿಬ್ಬಂದಿಗೂ ನೀಡಬೇಕಾಗಿ ಬಂದುದರಿಂದ ವೆಚ್ಚ ಅಧಿಕವಾಯಿತು. ಆರನೆಯ ದ್ವಿಪಕ್ಷೀಯ ಒಪ್ಪಂದದಂತೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೂ ವೇತನವನ್ನು ಹೆಚ್ಚಿಸಬೇಕೆಂಬ ಬೇಡಿಕೆ ತೀವ್ರವಾಗಿದ್ದು ಅದು ಈಡೇರುವ ಸಂದರ್ಭವಿರುವುದರಿಂದ ವೆಚ್ಚಗಳು ಮತ್ತಷ್ಟು ಏರುವುದು ಖಚಿತ. ಈಗ ಪಾವತಿ ಮಾಡಬೇಕಾಗಿರುವ ವೇತನ ಹಿಂಬಾಕಿಯನ್ನು ನೀಡುವುದೂ ಗ್ರಾಮೀಣ ಬ್ಯಾಂಕುಗಳಿಗೆ ಕಷ್ಟವಾಗಿದೆ. ಗ್ರಾಮೀಣ ಜನರ ಠೇವಣಿಗಳನ್ನೇ ಬಳಸಿ ಸಂಬಳ ನೀಡುವಂತಾದರೆ ಠೇವಣಿಗಳಿಗೆ ಭದ್ರತೆ ಏನು ? ಈ ಕಾರ್ಯ ಎಷ್ಟು ಕಾಲ ನಡೆದೀತು ?

ಗ್ರಾಮೀಣ ಬ್ಯಾಂಕುಗಳ ಸಾಲದ ಸ್ಥಿತಿಯೂ ಗಂಭೀರವಾಗಿಯೇ ಇದೆ. ಸಣ್ಣ ಪ್ರಮಾಣದ ಅಸಂಖ್ಯ ಸಾಲಗಳು ಲಾಭದಾಯಕತೆಗೆ ಪೆಟ್ಟು ಹಾಕಿವೆ. ಜತೆಗೆ ಕರಡುಸಾಲಗಳ ಪ್ರಮಾಣ ವಾಣಿಜ್ಯ ಬ್ಯಾಂಕುಗಳ ಕೃಷಿ ಸಾಲಗಳಲ್ಲಿ ಕಂಡುಬರುವಂತೆಯೇ ಅಧಿಕವಾಗಿದೆ. ಎಲ್ಲೋ ಕೆಲವು ಗ್ರಾಮೀಣ ಬ್ಯಾಂಕುಗಳು ಮಾತ್ರ ಸಾಲ ವಸೂಲಿಯಲ್ಲಿ ಯಶಸ್ಸು ಗಳಿಸಿವೆಯಾದರೂ ಒಟ್ಟಾರೆ ಪರಿಸ್ಥಿತಿ ಶೋಚನೀಯವಾಗಿಯೇ ಕಂಡುಬರುತ್ತಿದೆ. ನಬಾರ್ಡ್‌ನ ಪುನರ್ಧನ ಸೌಲಭ್ಯವನ್ನು ನೆಚ್ಚಿ ಸಾಲ ನೀಡಿಕೆ ಮುಂದುವರಿಯುತ್ತಿದೆ. ದುರ್ಬಲವಾಗಿರುವ ಈ ಬ್ಯಾಂಕುಗಳಿಗೆ ಬೆಂಬಲ ಹೆಚ್ಚಿಸುವ ಉದ್ದೇಶದಿಂದ ನಬಾರ್ಡ್ ವಾಣಿಜ್ಯ ಬ್ಯಾಂಕುಗಳಿಗೆ ತನ್ನ ಪುನರ್ಧನ ಸೌಲಭ್ಯವನ್ನು ಗಣನೀಯವಾಗಿ ಕಡಿತಗೊಳಿಸಿದೆ.

ಸ್ಥಳೀಯ ಕ್ಷೇತ್ರ ಬ್ಯಾಂಕುಗಳ ಸ್ಥಾಪನೆಗೆ ಪರವಾನಗಿ ಕೋರಿ ಅನೇಕ ಅರ್ಜಿಗಳು ರಿಸರ್ವ್ ಬ್ಯಾಂಕಿನ ಮುಂದೆ ಇವೆ. ಅವುಗಳಲ್ಲಿ ಇಪ್ಪತ್ತು ಸ್ಥಳೀಯ ಬ್ಯಾಂಕುಗಳಿಗೆ ಮೊದಲ ಸುತ್ತಿನಲ್ಲಿ ಪರವಾನಗಿ ನೀಡಲು ರಿಸರ್ವ್ ಬ್ಯಾಂಕ್ ತೀವ್ರವಾಗಿ ಆಲೋಚಿಸುತ್ತಿದೆ. ಆದ್ದರಿಂದ ಇಷ್ಟರಲ್ಲೇ ಕೆಲವು ಬ್ಯಾಂಕುಗಳು ಕಾರ್ಯಾರಂಭ ಮಾಡುವುವೆಂದು ಭಾವಿಸಲು ಅಡ್ಡಿಯಿಲ್ಲ. ಈ ಹೊಸ ತಳಿಯ ಬ್ಯಾಂಕುಗಳ ಪ್ರವೇಶದಿಂದ ಅವು ಕೆಲಸ ಮಾಡಲಿರುವ ಕ್ಷೇತ್ರದಲ್ಲಿರುವ ಗ್ರಾಮೀಣ ಬ್ಯಾಂಕುಗಳಿಗೆ ತೀವ್ರ ಆಘಾತ ಖಚಿತ. ಜತೆಗೆ ಅಲ್ಲಿ ಇರುವ ವಾಣಿಜ್ಯ ಬ್ಯಾಂಕುಗಳಿಗೂ ಪ್ರಬಲವಾದ ಪ್ರತಿಸ್ಪರ್ಧೆ ಏರ್ಪಟ್ಟು ಅವುಗಳ ಸಾಧನೆಯೂ ಕಳೆಗುಂದುತ್ತದೆ ಎಂದು ನಿರೀಕ್ಷಿಸಬೇಕು. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರಗಳಲ್ಲಿ ಸ್ಥಳೀಯ ಕ್ಷೇತ್ರದ ಬ್ಯಾಂಕುಗಳಿಗೆ ಪರವಾನಗಿ ನೀಡುವ ಅಗತ್ಯವಿಲ್ಲ. ಬಹುಶಃ ರಿಸರ್ವ್ ಬ್ಯಾಂಕ್ ಈ ಸಂಗತಿಯನ್ನು ಮರೆಯಲಾರದು. ಹೀಗಾದರೂ ಸ್ಥಳೀಯ ಪ್ರಾದೇಶಿಕ ಬ್ಯಾಂಕುಗಳ ಈ ಕಾರ್ಯಕ್ಷೇತ್ರದಲ್ಲಿ ಬರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮುಚ್ಚುವ ದಿನಗಳು ದೂರವಿರಲಾರವು ಎನಿಸಿದರೆ ಅದು ನಿರಾಶಾವಾದವಲ್ಲ, ವಾಸ್ತವತೆಯ ಅರಿವು.

ಈ ಹೊಸ ಬ್ಯಾಂಕುಗಳು ಸಿಬ್ಬಂದಿ ವೆಚ್ಚದಲ್ಲಿ ಮಿತಿ ಸಾಧಿಸುವುದು ಸುಲಭ. ಜತೆಗೆ ಅವುಗಳಿಗೆ ಶಿಷ್ಟೇತರ ಆಸ್ತಿಗಳ ಸಮಸ್ಯೆ ಸದ್ಯಕ್ಕಂತೂ ಇರುವುದಿಲ್ಲ. ಅವು ಗ್ರಾಮೀಣ ಬ್ಯಾಂಕುಗಳ ದೊಡ್ಡ ಗಾತ್ರದ ಠೇವಣಿಗಳನ್ನೂ, ಸಾಲಗಳನ್ನೂ ತೆಗೆದುಕೊಳ್ಳುವುವೆಂದು ಸುಲಭವಾಗಿ ನಿರೀಕ್ಷಿಸಬಹುದು. ಈ ನಿಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಕೆಲವು ಪ್ರತಿಬಂಧಕಗಳನ್ನು ಒಡ್ಡಿದರೂ ಅವನ್ನು ನಿವಾರಿಸಿಕೊಳ್ಳುವುದು ಕಷ್ಟವೇನಲ್ಲ. ಗ್ರಾಮೀಣ ಠೇವಣಿ ಸಂಗ್ರಹಣೆಯಲ್ಲಿ ವಾಣಿಜ್ಯ ಬ್ಯಾಂಕುಗಳು ಇನ್ನೂ ಸಾಧಿಸಬಹುದಾದದ್ದು ಬಹಳವಿತ್ತು ನಿಜ. ಆದಾಗಿಯೂ ಅವು ಸಾಕಷ್ಟು ಗ್ರಾಮೀಣ ಠೇವಣಿಗಳನ್ನು ಸಂಗ್ರಹಿಸಿದ್ದವೆಂಬುದನ್ನು ಅಲ್ಲಗಳೆಯುವಂತಿಲ್ಲ. ಹೊಸ ಸ್ಥಳೀಯ ಬ್ಯಾಂಕುಗಳು ಬರುವ ಕ್ಷೇತ್ರಗಳಲ್ಲಿ ಈ ಠೇವಣಿಗಳು ತೀವ್ರವಾಗಿ ಕಡಿಮೆಯಾದರೆ ಆಶ್ಚರ್ಯವಲ್ಲ. ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಉದರಿ ನೀಡಿಕೆಯೂ ಕಡಿಮೆಯಾಗುವುದು ಸಹಜ.

ಮೇಲೆ ಚರ್ಚಿಸಲಾದ ಸಂಗತಿಗಳು ರಿಸರ್ವ್ ಬ್ಯಾಂಕಿಗೆ ತಿಳಿಯದೇನೂ ಇಲ್ಲ. ಇಷ್ಟಾಗಿಯೂ ಸ್ಥಳೀಯ ಪ್ರಾದೇಶಿಕ ಬ್ಯಾಂಕುಗಳ ಸ್ಥಾಪನೆಗೆ ಕಾರ್ಯರಂಗ ಸಜ್ಜುಗೊಳ್ಳುತ್ತಿದೆ. ಬಹುಶಃ ನಿಷ್ಕ್ರಿಯತೆಯತ್ತ ಹೊರಳುತ್ತಿರುವ ಗ್ರಾಮೀಣ ಬ್ಯಾಂಕುಗಳಿಗೆ ಪರ್ಯಾಯ ವ್ಯವಸ್ಥೆಯಾಗಿ ಇದು ರೂಪುಗೊಳ್ಳುತ್ತಿವೆಯೋ ?

ಹಾಗೆಯೇ ವಾಣಿಜ್ಯ ಬ್ಯಾಂಕುಗಳನ್ನು ಗ್ರಾಮೀಣ ರಂಗದಿಂದ ಕೊಂಚ ದೂರವಿರಿಸಿದರೆ ಅವು ಇನ್ನಷ್ಟು ಲಾಭದಾಯಕವಾದಾವೆಂಬ ನಿರೀಕ್ಷೆಯೂ ಇದ್ದೀತು.

ಅಂತೂ ಸ್ಥಳೀಯ ಬ್ಯಾಂಕುಗಳ ಪ್ರವೇಶ ಗ್ರಾಮೀಣ ಬ್ಯಾಂಕುಗಳಿಗೂ, ವಾಣಿಜ್ಯ ಬ್ಯಾಂಕುಗಳಿಗೂ ಬಹು ದೊಡ್ಡ ಸವಾಲಾಗುವುದು ಖಚಿತ. ★

ಬ್ಯಾಂಕುಗಳ ಉತ್ಪಾದಕತೆ ಮತ್ತು ಲಾಭದಾಯಕತೆ

ಜಿ. ಆರ್. ವಿಶ್ವನಾಥ

ಅಧಿಕಾರಿ, ಕೆನರಾಬ್ಯಾಂಕ್, ಜಯನಗರ, ಬೆಂಗಳೂರು

ಬ್ಯಾಂಕು ಒಂದು ಹಣ ವ್ಯಾಪಾರ ಸಂಸ್ಥೆ. ಹಣ ಸಂಗ್ರಹಣೆ ಮತ್ತು ವಿತರಣೆಯ ಕಾರ್ಯದಲ್ಲಿ ದಕ್ಷತೆ ಅತ್ಯಂತ ಮುಖ್ಯ. ಬ್ಯಾಂಕು ಒಂದು ಸೇವಾ ಸಂಸ್ಥೆ ಕೂಡ. ಗ್ರಾಹಕರಿಗೂ ಸಾರ್ವಜನಿಕರಿಗೂ ಅದು ನೀಡುವ ನಾನಾ ಸೇವೆಗಳು ಗುಣಾತ್ಮಕವಾಗಿ ಉತ್ತಮವಾಗಿರುವುದು ಅತ್ಯಂತ ಅಗತ್ಯ. ಹೂಡಿದ ಹಣ, ತೊಡಗಿಸಿದ ಮಾನವ ಸಂಪನ್ಮೂಲ, ಅಳವಡಿಸಿಕೊಂಡ ಉಪಕರಣಗಳು, ವ್ಯಯಿಸಿದ ಸಮಯ ಇತ್ಯಾದಿಗಳ ದೃಷ್ಟಿಯಿಂದ ಪ್ರತಿಯೊಂದು ಉತ್ಪಾದನ ಘಟಕದ ಉತ್ಪಾದಕತೆಯ ಮಟ್ಟವೇನೆಂಬುದನ್ನು ಅಳೆಯುವುದು ಬಲು ಕಷ್ಟ. ಇದೊಂದು ಅತ್ಯಂತ ಸಂಕೀರ್ಣ ಪರಿಕಲ್ಪನೆ.

'ಉತ್ಪಾದಕತೆ' ಎಂದರೇನು ಎಂಬ ಪ್ರಶ್ನೆ ಅರ್ಥಶಾಸ್ತ್ರಜ್ಞರನ್ನು ಬಹಳ ದಿನದಿಂದ ಕಾಡುತ್ತಿದೆ. ಅವರು ಹಲವಾರು ವಿವರಣೆಗಳನ್ನು ಕೊಟ್ಟಿದ್ದಾರೆ. ಯಾವ ವಿವರಣೆಗಳೂ ಈವರೆವಿಗೆ ಪೂರ್ಣವಾಗಿಲ್ಲ. ಒಟ್ಟಾರೆ ಅಭಿಪ್ರಾಯದಲ್ಲಿ ಹೂಡಿದ ಮತ್ತು ಮರಳಿ ಪಡೆಯುವ ಸಂಪನ್ಮೂಲದ ಅನುಪಾತವೆಂದು ಹೇಳಬಹುದು.

ಉತ್ಪಾದನೆ ಎಂದರೇನು ?

ಉತ್ಪಾದನೆ ಎಂದರೆ ಸಂಸ್ಥೆಯು ಹೂಡಿದ ಮತ್ತು ಮರಳಿ ಪಡೆಯುವ ಸಂಪನ್ಮೂಲಗಳ ವ್ಯತ್ಯಾಸ. ಈ ವ್ಯತ್ಯಾಸ ಯಾವಾಗಲೂ ಧನಾತ್ಮಕವಾಗಿರಬೇಕು. ಆಗ ಮಾತ್ರ ಸಂಸ್ಥೆ ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂದೂ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದೂ ತಿಳಿಯಬಹುದು,

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯ ಪಾತ್ರ

ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಅಳೆಯುವುದು ಸುಲಭ. ಏಕೆಂದರೆ ಕೈಗಾರಿಕೆಯಲ್ಲಿ ವಸ್ತುಗಳ ಉತ್ಪಾದನೆಯಾಗುತ್ತದೆ. ಕಚ್ಚಾವಸ್ತುಗಳಿಂದ ಪ್ರಾರಂಭವಾಗಿ ಸಿದ್ಧವಸ್ತುವಿನ ತನಕ ಇರುವ ಹಂತಗಳಲ್ಲಿ ಆಗುವ ಖರ್ಚು ವೆಚ್ಚಗಳನ್ನು ಕ್ರೋಡೀಕರಿಸಿದರೆ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಸುಲಭವಾಗಿ ಅಳೆಯಬಹುದು. ಆದರೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾರ್ವಜನಿಕರಿಗೆ ಕೊಡುವ ಸೇವೆಗಳನ್ನು ಮಾತ್ರ ಕೇಂದ್ರದಲ್ಲಿಟ್ಟುಕೊಂಡು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಅಳೆಯಬೇಕು. ಇನ್ನೊಂದು ಪ್ರಮುಖ ವಿಚಾರವೇನೆಂದರೆ ಎಲ್ಲ ಬ್ಯಾಂಕಿಂಗ್ ಸಂಸ್ಥೆಗಳಲ್ಲಿಯೂ ಸಿಕ್ಕುವ ಸೌಲಭ್ಯಗಳು ಒಂದೇ ರೀತಿಯವು. ಇಲ್ಲಿ ವೈವಿಧ್ಯಕ್ಕೆ ಅವಕಾಶ ಎಲ್ಲ.

ಬ್ಯಾಂಕಿಂಗ್ ಸಂಸ್ಥೆಗಳು ಹೂಡುವ ಬಂಡವಾಳ/ ಸಂಪನ್ಮೂಲಗಳು

1 ಆರ್ಥಿಕ ಸಂಪನ್ಮೂಲ,
2 ಮಾನವ ಸಂಪನ್ಮೂಲ.

ಆರ್ಥಿಕ ಸಂಪನ್ಮೂಲ : ಬ್ಯಾಂಕಿಂಗ್‌ಕ್ಷೇತ್ರದಲ್ಲಿ ಆರ್ಥಿಕ ಸಂಪನ್ಮೂಲ ಬಹಳ ಮುಖ್ಯವಾದುದು. ಬ್ಯಾಂಕಿಂಗ್ ಸಂಸ್ಥೆಗಳ ಮುಖ್ಯ ವ್ಯವಹಾರ ಎಂದರೆ ಠೇವಣಿ ಸಂಗ್ರಹ ಮತ್ತು ಸಾಲ, ಮುಂಗಡಗಳ ನೀಡಿಕೆ. ಸಂಸ್ಥೆಗಳಿಗೆ ತಮ್ಮದೇ ಆದ ಬಂಡವಾಳ ಇರಬೇಕು. ಇದು ಸುಭದ್ರಸ್ಥಿತಿಯಲ್ಲಿದ್ದರೆ ವ್ಯವಹಾರ ಸುಗಮವಾಗಿ ನಡೆಯುತ್ತದೆ. ತಮ್ಮದೇ ಆದ ಬಂಡವಾಳ ಪ್ರತಿವರ್ಷ ಉತ್ತಮಗೊಳ್ಳಬೇಕು. ಆಗ ಸಂಸ್ಥೆ ಲಾಭದಾಯಕ ಸ್ಥಿತಿಯಲ್ಲಿದೆ ಯೆಂದೂ ತನ್ನ ಮೂಲ ಬಂಡವಾಳಕ್ಕೆ ಯಾವ ಸವಕಳಿ ಇಲ್ಲವೆಂದೂ ಸ್ಪಷ್ಟವಾಗುತ್ತದೆ. ಸಾರ್ವಜನಿಕರಿಗೆ ಮುಂಗಡ ಮತ್ತು ಸಾಲ ನೀಡುವಿಕೆಯ ಕೆಲಸವನ್ನು ಸಮರ್ಪಕವಾಗಿ ಮಾಡಬಹುದು.

ಮಾನವಸಂಪನ್ಮೂಲ : ಸಂಸ್ಥೆಯ ಆರ್ಥಿಕ ಪರಿಸ್ಥಿತಿ

ಎಷ್ಟೇ ಸುಭದ್ರವಾಗಿದ್ದರೂ ಸಮರ್ಪಕವಾದ ಮಾನವ ಸಂಪನ್ಮೂಲ ಇಲ್ಲದಿದ್ದರೆ, ಸಂಸ್ಥೆಯ ಬೆಳವಣಿಗೆ ಕುಂಠಿತವಾಗುತ್ತದೆ. ಮಾನವ ಸಂಪನ್ಮೂಲ ಬಹು ವಿಚಿತ್ರವಾದುದು. ಮಾನವ ಸಂಪನ್ಮೂಲ ಬಹಳ ವಿಚಾರಗಳಿಂದ ಸೇರಿದೆ. ಇದರ ಫಲಿತಾಂಶ ಶುದ್ಧ ವಿಜ್ಞಾನದಂತೆ ಇರಲು ಸಾಧ್ಯವಿಲ್ಲ. ಸಾಮಾಜಿಕ ಅಂಶಗಳು ಒಂದನ್ನೊಂದು ಅವಲಂಬಿಸಿರುತ್ತವೆ.

ಬ್ಯಾಂಕಿಂಗ್ ಸಂಸ್ಥೆಗಳ ಕಾರ್ಯಕ್ಷೇತ್ರಗಳು

1 ಠೇವಣಿ ಸಂಗ್ರಹ,
2 ಸಾಲ ಸೌಲಭ್ಯಗಳನ್ನು ಒದಗಿಸುವುದು,
3 ಸರ್ಕಾರದ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು,
4 ತೆರಿಗೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ರವಾನಿಸುವುದು,
5 ಉಯಿಲುಗಳನ್ನು ನಿರ್ವಹಿಸುವುದು,
6 ಇತರೆ ತತ್ಸಂಬಂಧ ಕಾರ್ಯಗಳು.

ಬ್ಯಾಂಕಿಂಗ್ ಸಂಸ್ಥೆಗಳ ಮುಖ್ಯ ಕಾರ್ಯಕ್ಷೇತ್ರಗಳೆಂದರೆ ಠೇವಣಿ ಸಂಗ್ರಹ ಮತ್ತು ಸಾಲ ಮತ್ತು ಮುಂಗಡಗಳ ನೀಡಿಕೆ—ಇವು ಸಮರ್ಪಕವಾಗಿದ್ದಲ್ಲಿ ಸಂಸ್ಥೆಯ ಉತ್ಪಾದಕತೆ ಉತ್ತಮವಾಗಿರುತ್ತದೆ. ಸಂಸ್ಥೆ ತನ್ನ ಎಲ್ಲ ಕ್ಷೇತ್ರದ ಮೇಲೆ ಸಮಗ್ರ ದೃಷ್ಟಿಯನ್ನು ಇರಿಸಿ ಉತ್ಪಾದಕತೆಯನ್ನು ಸಾಧಿಸಬೇಕಾಗಿದೆ. ಸರ್ಕಾರದ ಉದಾರೀಕರಣದ ನೀತಿಯಿಂದಾಗಿ ಮಾರುಕಟ್ಟೆಯಲ್ಲಿ ಸ್ಪರ್ಧೆ ಹೆಚ್ಚುತ್ತಿದೆ. ಬ್ಯಾಂಕಿಂಗೇತರ ಸಂಸ್ಥೆಗಳು ಹುಟ್ಟಿಕೊಂಡು ಗ್ರಾಹಕರನ್ನು ಆಕರ್ಷಿಸುತ್ತಿವೆ. ಗ್ರಾಹಕರು ಹೆಚ್ಚು ಬಡ್ಡಿ ಎಲ್ಲಿ ಸಿಕ್ಕುತ್ತದೋ ಅಲ್ಲಿಗೆ ಹೋಗಿ ತಮ್ಮ ಹಣವನ್ನು ತೊಡಗಿಸುವುದು ಸಹಜ. ಈ ಪೈಪೋಟಿಯಿಂದಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇರುವ ಪರಿಕಲ್ಪನೆ "ಮಾರುಕಟ್ಟೆಯಲ್ಲಿ ಸಂಸ್ಥೆಯ ಪಾಲು" (Market Share) ಹೆಚ್ಚು ಅರ್ಥಪೂರ್ಣವಾಗುತ್ತಿದೆ.

ಮಾರುಕಟ್ಟೆಯಲ್ಲಿ ಬ್ಯಾಂಕಿಂಗ್ ಸಂಸ್ಥೆ ತೊಡಗಿಸುವ ಸಂಪನ್ಮೂಲಗಳು

ಅ ಶಾಖೆಗಳ ಜಾಲ,
ಆ ಸಿಬ್ಬಂದಿಯ ಸಂಖ್ಯೆ,
ಇ ಸಿಬ್ಬಂದಿಗೆ ಕೊಡುವ ಸಂಬಳ ಮತ್ತು ಸವಲತ್ತು,
ಈ ಸಂಬಳ ಅಲ್ಲದೆ ಇತರೆ ಖರ್ಚುಗಳು.

ಮಾರುಕಟ್ಟೆಯಿಂದ ಮರಳಿ ಪಡೆಯುವ ಸಂಪನ್ಮೂಲಗಳು

1 ಠೇವಣಿಯ ಹಣ,
2 ಠೇವಣಿಯಲ್ಲದೆ ಕಾರ್ಯನಿರ್ವಾಹಕ ನಿಧಿ,
3 ಮುಂಗಡ ಮತ್ತು ಸಾಲ ಕೊಡಲು ಹಣ,
4 ಮುಂಗಡ ಮತ್ತು ಸಾಲದಿಂದ ಬರುವ ಬಡ್ಡಿ,
5 ಇತರೆ ಆದಾಯಗಳು.

ಮೇಲೆ ತಿಳಿಸಿದ ಅಂಶಗಳು ಬ್ಯಾಂಕಿಂಗ್ ಸಂಸ್ಥೆಯ ಉತ್ಪಾದಕತೆಯ ಶೇಕಡಾ ಪರಿಣಾಮವನ್ನು ಈ ಸೂತ್ರದ ಮೂಲಕ ತಿಳಿಯಬಹುದು :

ಮಾರುಕಟ್ಟೆಯಲ್ಲಿ ಸರಾಸರಿ ಹುಟ್ಟುವಳಿಯ ಪಾಲು

ಮಾರುಕಟ್ಟೆಯಲ್ಲಿ ಸರಾಸರಿ ಸಂಪನ್ಮೂಲಗಳ ಹೂಡಿಕೆ, ಮಾರುಕಟ್ಟೆಯಲ್ಲಿ ಪಾಲು ಮತ್ತು ಪ್ರತಿಕ್ರಿಯೆಯನ್ನು ತಿಳಿಯಲು ತೌಲನಿಕ ಅಧ್ಯಯನದ ಅಗತ್ಯ ಇದೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾರುಕಟ್ಟೆ ಎಂದರೇನು ?

ಬ್ಯಾಂಕಿಂಗ್ ಸಂಸ್ಥೆಗಳ ಸಮೂಹಕ್ಕೆ ನಾವು ಸ್ಥೂಲವಾಗಿ ಬ್ಯಾಂಕಿಂಗ್ ಮಾರುಕಟ್ಟೆ ಎಂದು ಕರೆಯಬಹುದು. ಬ್ಯಾಂಕಿಂಗ್ ಸಂಸ್ಥೆಗಳನ್ನು ಈ ರೀತಿ ವರ್ಗೀಕರಣ ಮಾಡಬಹುದು :

1 ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು,
2 ಖಾಸಗಿ ಕ್ಷೇತ್ರದ ಬ್ಯಾಂಕುಗಳು,
3 ವಿದೇಶೀ ಬ್ಯಾಂಕುಗಳು.

ಈ ಸಂಸ್ಥೆಗಳು ಯಾವ ರೀತಿಯಲ್ಲಿ ತಮ್ಮ ಉತ್ಪಾದಕತೆಯನ್ನು ಸಾಧಿಸಿವೆ ಎಂದು ತಿಳಿಯಲು ತೌಲನಿಕ ಅಧ್ಯಯನದ ಅಗತ್ಯ ಇದೆ. ಈ ಅಧ್ಯಯನದಿಂದ ಸಮಗ್ರ ಚಿತ್ರ ಸಿಕ್ಕುತ್ತದೆ.

ಮಾರುಕಟ್ಟೆಯಲ್ಲಿ ಸಂಸ್ಥೆಗಳು ಹೂಡುವ ಸಂಪನ್ಮೂಲಗಳ ವಿವರ :

(ಅ) ಶಾಖೆಗಳ ಜಾಲ : ಬ್ಯಾಂಕಿಂಗ್ ಶಾಖೆಗಳಲ್ಲಿ ಮೂರು ವಿಧ: (1) ಮಹಾನಗರಗಳ ಶಾಖೆ, (2) ಅರೆಪಟ್ಟಣಗಳ ಶಾಖೆ, (3) ಗ್ರಾಮೀಣ ಶಾಖೆ.

ಮಹಾನಗರ ಶಾಖೆಗಳಲ್ಲಿ ಮೂರು ವಿಧ: ಕೈಗಾರಿಕಾಕ್ಷೇತ್ರದಲ್ಲಿ ಇರುವ ಶಾಖೆ, ಜನರು ವಾಸ ಮಾಡುವ ಸ್ಥಳಗಳಲ್ಲಿ ಇರುವ ಶಾಖೆ ಮತ್ತು ವ್ಯಾಪಾರಕೇಂದ್ರಗಳಲ್ಲಿ ಇರುವ ಶಾಖೆ. ಕೈಗಾರಿಕಾ ಕ್ಷೇತ್ರದಲ್ಲಿ ಇರುವ ಶಾಖೆಗಳಿಗೆ ಮುಂಗಡ ಪ್ರಧಾನವಾಗಿರುತ್ತದೆ. ವ್ಯಾಪಾರ ಸ್ಥಳಗಳಲ್ಲಿ ಇರುವ ಶಾಖೆಗಳಿಗೆ ದೈನಂದಿನ ಚಟುವಟಿಕೆಗೆ ಬೇಕಾದ ಬಂಡವಾಳ ಪ್ರಧಾನವಾಗಿರುತ್ತದೆ. ಬಡಾವಣೆಗಳಲ್ಲಿರುವ ಶಾಖೆಗಳಿಗೆ ಠೇವಣಿ ಸಂಗ್ರಹದ ವಿಚಾರವೇ ಪ್ರಧಾನವಾಗಿರುತ್ತದೆ. ಹೀಗೆ ಆಯಾ ಪ್ರದೇಶದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಶಾಖೆಗಳ ಜಾಲವನ್ನು ಹರಡಬೇಕಾಗಿದೆ.

(ಆ) ಸಿಬ್ಬಂದಿಯ ಸಂಖ್ಯೆ : ಈ ವಿಚಾರದಲ್ಲಿ ಸಾಕಷ್ಟು ವಾದವಿವಾದಗಳಿವೆ. ಮಾನವಸಂಪನ್ಮೂಲದ ವಿಚಾರ ಬಹಳ ವಿಚಿತ್ರ. ಮನುಷ್ಯನ ಕಾರ್ಯದಕ್ಷತೆ ಸಂದರ್ಭಕ್ಕೆ ತಕ್ಕಂತೆ ಇದೇ ರೀತಿ ಇರುತ್ತದೆ ಎಂದು ಹೇಳುವುದು ಬಹಳ ಕಷ್ಟ. ಮಾನವ ಸಂಪನ್ಮೂಲದ ದಕ್ಷತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು

ಹೊಸ ಹೊಸ ಕಾರ್ಯಕ್ರಮಗಳನ್ನು ಬ್ಯಾಂಕಿಂಗ್ ಸಂಸ್ಥೆಗಳು ಹಾಕಿಕೊಂಡಿವೆ. ಅವುಗಳಲ್ಲಿ ಮುಖ್ಯವಾದವು :

(i) ಬದಲಾಗುತ್ತಿರುವ ಬ್ಯಾಂಕಿಂಗ್ ವಿಚಾರಗಳನ್ನು ಮತ್ತು ಹೊಸ ಹೊಸ ವಿಚಾರಗಳನ್ನು ಸಿಬ್ಬಂದಿಗೆ ಕಾಲಕಾಲಕ್ಕೆ ತಿಳಿಸುವುದು.

(ii) ವಿಶೇಷ ಕಾರ್ಯಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ತಮ್ಮ ಸಿಬ್ಬಂದಿಯನ್ನು ಸಂಬಂಧಪಟ್ಟ ಸಂಸ್ಥೆಗೆ ಕಳುಹಿಸುವುದು.

(iii) ವಿವಿಧ ಕ್ಷೇತ್ರಗಳ ಪರಿಣತರನ್ನು ಕರೆಸಿ ಉಪಯುಕ್ತ ವಿಚಾರದಲ್ಲಿ ಉಪನ್ಯಾಸವನ್ನು ಏರ್ಪಡಿಸುವುದು.

ತರಬೇತಿ ಹೊಂದಿದ ಮತ್ತು ಶ್ರದ್ಧೆಯಿಂದ ಕೆಲಸ ಮಾಡುವ ಸಿಬ್ಬಂದಿಯೇ ಸಂಸ್ಥೆಯ ಆಸ್ತಿ ಎಂಬುದನ್ನು ಮರೆಯಬಾರದು. ವಿಶೇಷ ಸೇವೆಗಳು ಎಲ್ಲಿ ಅಗತ್ಯವಿದೆಯೋ ಅಲ್ಲಿ ಸೂಕ್ತ ರೀತಿಯ ಸಿಬ್ಬಂದಿಯನ್ನು ವಿಸ್ತರಿಸಿದರೆ, ಸಂಸ್ಥೆ ಮಾರುಕಟ್ಟೆಯಲ್ಲಿ ತನ್ನ ಹೆಸರನ್ನು ಸಂಪಾದಿಸಿಕೊಳ್ಳಬಹುದು.

ಸಿಬ್ಬಂದಿಗೆ ಕೊಡುವ ಸಂಬಳ ಸವಲತ್ತುಗಳ ವಿಚಾರ

ಉತ್ಪಾದಕತೆಯ ವಿಚಾರದಲ್ಲಿ ಇದು ಬಹು ಮುಖ್ಯವಾದ ಅಂಗ. ಮನೋವಿಜ್ಞಾನಿಗಳ ಪ್ರಕಾರ ಮಾನವಸಂಪನ್ಮೂಲದಲ್ಲಿ ಪ್ರೇರಣೆಯನ್ನು ಧನಾತ್ಮಕವಾಗಿ ಕೊಡುವುದರಲ್ಲಿ ಸಂಬಳ ಸವಲತ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿದು ಬಂದಿದೆ. ಆಡಳಿತವರ್ಗ ಮತ್ತು ಸಿಬ್ಬಂದಿವರ್ಗ ಈ ವಿಚಾರದಲ್ಲಿ ದೀರ್ಘ ಚರ್ಚೆ ನಡೆಸಿ ನಿರ್ಧಾರಕ್ಕೆ ಬರಬೇಕು. ಉತ್ಪಾದಕತೆ ಹೆಚ್ಚಿದರೆ ಮಾತ್ರ ತಮ್ಮ ಮತ್ತು ಸಂಸ್ಥೆಯ ಭವಿಷ್ಯ ಉತ್ತಮಗೊಳ್ಳುವುದು ಎಂಬ ಅಂಶ ಪ್ರತಿಯೊಬ್ಬರಿಗೂ ಮನವರಿಕೆಯಾಗಬೇಕು. ಸಿಬ್ಬಂದಿವರ್ಗ ತಮಗೆ ಸಿಕ್ಕುವ ಹಣವು ಅಪಮೌಲ್ಯವಾಗದಂತೆ ಕೆಲಸ ಮಾಡಬೇಕು. ಆಗ ಮಾತ್ರ ಉತ್ಪಾದಕತೆಯು ಹೆಚ್ಚುತ್ತದೆ.

ಇತರ ಖರ್ಚುಗಳು

1. ಕಾರ್ಯಾಲಯದ ಬಾಡಿಗೆ,
2. ಕಾರ್ಯಾಲಯದಲ್ಲಿ ಒದಗಿಸಬೇಕಾದ ಸೌಲಭ್ಯಗಳ ಖರ್ಚು,
3. ಬೇರೆ ಬ್ಯಾಂಕಿಂಗ್ ಸಂಸ್ಥೆಗಳ ಜೊತೆಯಲ್ಲಿ ಕೆಲಸ ಮಾಡಬೇಕಾದಾಗ ಬರುವ ಅನಿವಾರ್ಯ ಖರ್ಚುಗಳು,
4. ಇತರೆ ಖರ್ಚುಗಳು.

ಪೈಪೋಟಿ ಮತ್ತು ಪ್ರತಿಷ್ಠೆಯ ಈ ಯುಗದಲ್ಲಿ ಶಾಖೆಗಳ ಕಟ್ಟಡ ಅಚ್ಚುಕಟ್ಟು ಮತ್ತು ಆಕರ್ಷಣೀಯವಾಗಿರಬೇಕು.

ಹಣಕಾಸು ಮತ್ತು ಪ್ರತಿಭೂತಿಗಳ ಭದ್ರತೆ, ಭದ್ರತಾ ಕಪಾಟು, ವಿದ್ಯುಚ್ಛಕ್ತಿಯ ಪೂರೈಕೆ, ಗ್ರಾಹಕರು ಬಂದು ತಮ್ಮ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುವಷ್ಟು ವಿಶಾಲವಾದ ಜಾಗ ಮತ್ತು ಕಟ್ಟಡವನ್ನು ಪ್ರತಿನಿತ್ಯ ಅಚ್ಚುಕಟ್ಟಾಗಿಡುವುದು ಮುಂತಾದ ವಿಚಾರಗಳಿಗೆ ಖರ್ಚುಗಳು ಬರುತ್ತವೆ. ಹಲವು ವೇಳೆ ಇದು ದುಬಾರಿಯೂ ಆಗಬಹುದು. ಈ ಖರ್ಚುಗಳು ನಿರಂತರವಾಗಿ ಬರುತ್ತವೆ. ಆದ್ದರಿಂದ ಸಂಸ್ಥೆ ತನ್ನ ಉತ್ಪಾದನೆಯಲ್ಲಿ ಈ ಖರ್ಚುಗಳಿಗೆ ವಿಾಸಲಿಡಬೇಕಾಗುತ್ತದೆ.

ಬ್ಯಾಂಕಿಂಗ್ ಸಂಸ್ಥೆಗಳು ಮಾರುಕಟ್ಟೆಯಿಂದ ಮರಳಿ ಪಡೆಯುವ ಸಂಪನ್ಮೂಲಗಳು.

ಠೇವಣಿ ಹಣ

ಮೊದಲನೆಯದಾಗಿ ಸಂಸ್ಥೆಗಳು ಮರಳಿ ಪಡೆಯುವ ಸಂಪನ್ಮೂಲವೆಂದರೆ ಠೇವಣಿ ಹಣ. ಠೇವಣಿ ಸಂಗ್ರಹವು ಯಶಸ್ವಿಯಾಗಬೇಕಾದರೆ—

(ಅ) ಸೇವೆಯಲ್ಲಿ ವಿಳಂಬ ಮತ್ತು ಲೋಪದೋಷಗಳಿರಬಾರದು.

(ಆ) ಆಕರ್ಷಕ ಬಡ್ಡಿದರ ಇರಬೇಕು.

(ಇ) ಗ್ರಾಹಕರಿಗೆ ತಾವು ಇಟ್ಟ ಹಣ ಸುರಕ್ಷಿತವಾಗಿರುತ್ತದೆ ಎಂದು ಮನವರಿಕೆಯಾಗಬೇಕು.

ಠೇವಣಿ ಸಂಗ್ರಹ ಸಮರ್ಪಕವಾಗಿದ್ದರೆ, ಮುಂದೆ ಮುಂಗಡ ಕೊಡಲು ಅನುಕೂಲವಾಗುತ್ತದೆ ಮತ್ತು ಉತ್ಪಾದಕತೆಯು ಹೆಚ್ಚುತ್ತದೆ.

ಕಾರ್ಯನಿರ್ವಾಹಕ ನಿಧಿ

ಸಂಸ್ಥೆ ಪ್ರತಿವರ್ಷ ತಾನು ಗಳಿಸಿದ ಹುಟ್ಟುವಳಿಯಲ್ಲಿ ಸ್ವಲ್ಪಭಾಗವನ್ನು ಕಾರ್ಯನಿರ್ವಾಹಕ ನಿಧಿಯನ್ನಾಗಿ ಪರಿವರ್ತಿಸಿ ಇಡಬೇಕಾಗುತ್ತದೆ. ಇದು ಸಮರ್ಪಕವಾಗಿದ್ದಲ್ಲಿ ಸಂಸ್ಥೆ ಉತ್ಪಾದನೆ ಮತ್ತು ಉತ್ಪಾದಕತೆಯು ಸಮರ್ಪಕವಾಗಿದೆ ಎಂದು ತಿಳಿಯಬಹುದು.

ಸಾಲ ಮತ್ತು ಮುಂಗಡಗಳಿಂದ ಪಡೆಯುವ ಬಡ್ಡಿ

ಸಾಲ ಮತ್ತು ಮುಂಗಡಗಳಿಗೆ ಸಂಸ್ಥೆ ಬಡ್ಡಿಯನ್ನು ವಿಧಿಸುತ್ತದೆ. ಠೇವಣಿಯ ಮೇಲೆ ಕೊಡುವ ಮತ್ತು ಮುಂಗಡಕ್ಕೆ ವಿಧಿಸುವ ಬಡ್ಡಿಯ ದರದ ವ್ಯತ್ಯಾಸವೇ ಬ್ಯಾಂಕಿಂಗ್ ಸಂಸ್ಥೆಗಳ ಆದಾಯದ ಮುಖ್ಯ ಪಾಲು. ಈ ವ್ಯತ್ಯಾಸವನ್ನು ಬ್ಯಾಂಕಿಂಗ್ ಸಂಸ್ಥೆ ತನಗೆ ಬೇಕಾದಂತೆ ಹಿಗ್ಗಿಸಲು ಸಾಧ್ಯವಿಲ್ಲ. ಕೇಂದ್ರ ಬ್ಯಾಂಕಿಂಗ್ ಸಂಸ್ಥೆ ಅನಾವಶ್ಯಕ ಪೈಪೋಟಿಯನ್ನು ತಪ್ಪಿಸಲು ಬಡ್ಡಿಯ ದರಗಳನ್ನು ನಿಯಂತ್ರಿಸುತ್ತದೆ. ಇತ್ತೀಚೆಗೆ ಸರ್ಕಾರ ತನ್ನ ಉದಾರೀಕರಣದ ನೀತಿಯನ್ನು ಅನುಸರಿಸಿ 3 ಲಕ್ಷ ರೂ.ಗಳಿಗೆ ವಿಾರಿದ ಸಾಲಕ್ಕೆ ವಿಧಿಸುವ ಬಡ್ಡಿಯ ದರವನ್ನು ಆಯಾ ಸಂಸ್ಥೆ ನಿರ್ಧರಿಸಲು ಬಿಟ್ಟುಕೊಟ್ಟಿದೆ.

(16ನೇ ಪುಟ ನೋಡಿ)

ಮೈಸೂರು ಬ್ಯಾಂಕ್ ಎದುರಿಸುತ್ತಿರುವ ಸವಾಲುಗಳು

ಶ್ರೀಧರ ರಾಯಸಂ

ಮೈಸೂರು ಬ್ಯಾಂಕ್, ಕೌಲ್ ಬಜಾರ್ ಶಾಖೆ, ಬಳ್ಳಾರಿ

ಹಳೆಯ ಮೈಸೂರು ಸಂಸ್ಥಾನದಲ್ಲಿ ಮಹಾರಾಜರ ಸರ್ಕಾರದ ದೂರದೃಷ್ಟಿಯ ಫಲವಾಗಿ ಸ್ಥಾಪಿತವಾದ ಮೈಸೂರು ಬ್ಯಾಂಕು ನಾಡಿನ ಆರ್ಥಿಕ ವಿಕಾಸವನ್ನು ಸಾಧಿಸುವುದರಲ್ಲಿ ಮಹತ್ತ್ವದ ಪಾತ್ರ ವಹಿಸಿದೆ. ಅಂತೆಯೇ, ತಾನೂ ವಿಶಿಷ್ಟವಾದ ರೀತಿಯಲ್ಲಿ ರೂಪುಗೊಂಡಿದೆ. ಆದರೆ ಕೇಂದ್ರದ ನೀತಿಯಿಂದಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಗುಂಪಿಗೆ ಬಲವಂತವಾಗಿ ಸೇರಬೇಕಾಗಿ ಬಂದು ತನ್ನ ಸ್ವರೂಪವನ್ನೇ ಕಳೆದುಕೊಂಡಿದೆ. ವಿಶಿಷ್ಟ ಸೇವೆ ಸಲ್ಲಿಸುವ ನಿಟ್ಟಿನಲ್ಲೂ ಹಲವೆಂಟು ವಿಘ್ನಗಳನ್ನು ಎದುರಿಸುತ್ತಿದೆ.

ಭಾರತ ದೇಶದಲ್ಲಿ ಬ್ಯಾಂಕುಗಳು ಆರ್ಥಿಕ ಬೆನ್ನೆಲುಬಾಗಿ ಕೆಲಸ ನಿರ್ವಹಣೆ ಮಾಡುತ್ತಾ ಒಂದು ವ್ಯವಸ್ಥಿತ ರೀತಿಯಲ್ಲಿ ಸಮಾಜದ ಜನರ ಬದುಕಿಗೆ ನೆಲೆಯಾಗಿವೆ. ಜುಲೈ 19, 1969ರಲ್ಲಿ ಹದಿನಾಲ್ಕು ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ ಕೇವಲ ಕೆಲವೇ ವರ್ಗಗಳಿಗೆ ಮೀಸಲಾಗಿದ್ದ ಬ್ಯಾಂಕುಗಳು ಶ್ರೀಸಾಮಾನ್ಯನಿಗೂ ಆರ್ಥಿಕ ನೆರವು ನೀಡುವುದರಲ್ಲಿ ಮುಂದಾಗಿದ್ದು ಒಂದು ರೀತಿಯಿಂದ ಆರ್ಥಿಕ ಕ್ರಾಂತಿಯನ್ನೇ ಮಾಡಿದವು ಎಂದರೆ ಅತಿಶಯೋಕ್ತಿಯಾಗಲಾರದು. ಸಮಾಜದ ಎಲ್ಲ ವರ್ಗದ ಜನರೂ ಬ್ಯಾಂಕುಗಳ ಉಪಯೋಗ ಪಡೆಯಲು ಮುಂದಾಗಿ ಸಾಲಿಗರ ಮೇಲೆ ಪರಾವಲಂಬಿಗಳಾಗದೆ ಅವರ ಆರ್ಥಿಕಸುಭದ್ರತೆಗೆ ಅಡಿಪಾಯ ಹಾಕಲು ಬ್ಯಾಂಕುಗಳು ಮಹತ್ತರ ಪಾತ್ರ ವಹಿಸಿ ನೆರವು ನೀಡಿದವು. ವಿಸ್ತಾರವಾದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿವಿಧ ಬ್ಯಾಂಕುಗಳು ಕೃಷಿ ಸಾಲ, ಸಣ್ಣ ಕೈಗಾರಿಕೆಗೆ, ಗುಡಿ ಕೈಗಾರಿಕೆಗೆ, ಹೈನುಗಾರಿಕೆಗೆ, ಮೀನುಗಾರಿಕೆಗೆ, ಜೇನು ಸಾಕಣಿಕೆಗೆ, ಕಾಫಿ ಬೆಳೆಯಲು, ಸಣ್ಣ ವ್ಯಾಪಾರ ಮಾಡಲು, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗೆ, ನೀರಾವರಿಗೆ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡಿ ಸಮಾಜದಲ್ಲಿನ ಜನರ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನೇ ಬದಲಾಯಿಸಿದವು. ಜನಸಾಮಾನ್ಯರ ಬದುಕು ಸರ್ವತೋಮುಖವಾಗಿ ಅಭಿವೃದ್ಧಿಯಾಗಲು ಬ್ಯಾಂಕುಗಳು ಗಮನ ಹರಿಸಿದವು. ಗ್ರಾಮೀಣ ಜನರು, ನಗರವಾಸಿಗಳು ಇದರ ನೆರವು ಪಡೆದು ಸಫಲರಾದರು. ಹಲವರು ಸಣ್ಣ ವ್ಯಾಪಾರಗಾರರು, ಬ್ಯಾಂಕುಗಳ ಆರ್ಥಿಕ ನೆರವಿನಿಂದ ದೊಡ್ಡ ಉದ್ದಿಮೆದಾರರಾದ ಉದಾಹರಣೆಗಳುಂಟು.

ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಭಾರತೀಯ ಬ್ಯಾಂಕುಗಳ ಸಂಘದಿಂದ ರಾಷ್ಟ್ರೀಕೃತ ಬ್ಯಾಂಕುಗಳು ನಿಯಂತ್ರಿಸಲ್ಪಟ್ಟು ಠೇವಣಿಗಳ ಮೇಲಿನ ಬಡ್ಡಿದರ, ಸಾಲದ ಬಡ್ಡಿದರ, ಮತ್ತು ಹಲವಾರು ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುವ ಕಾನೂನು ತೊಡಕಾಗಿರುವುದರಿಂದ ವಿವಿಧ ಖಾಸಗಿ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು, ಖಾಸಗಿ ಹಣಕಾಸಿನ ಸಂಸ್ಥೆಗಳು, ಮ್ಯೂಚುಯಲ್ ಫಂಡ್ ಸಂಸ್ಥೆಗಳ ಪೈಪೋಟಿ ಎದುರಿಸುವ ಕಾಲ ಬಂದೊದಗಿದೆ. ಈ ಸಮಸ್ಯೆಗೆ ಮೈಸೂರು ಬ್ಯಾಂಕು ಹೊರತಾಗಿಲ್ಲ. ಮೈಸೂರು ಬ್ಯಾಂಕು ತನ್ನದೇ ಆದ ಪ್ರಾದೇಶಿಕತೆಯ ಗುರುತಿಸುವಿಕೆಯ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿದ್ದರೂ, ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಭಾರತೀಯ ಬ್ಯಾಂಕುಗಳ ಸಂಘಗಳ ಹಿಡಿತದೊಂದಿಗೆ ಭಾರತೀಯ ಸ್ಟೇಟ್ ಬ್ಯಾಂಕಿನ ಅಧೀನದಲ್ಲಿರುವುದರಿಂದ ಸ್ವತಂತ್ರವಾಗಿ ನಿರ್ವಹಣೆ ಮಾಡಲು ಅಸಮರ್ಥವಾಗಿದೆ ಹಾಗೂ ಇನ್ನಿತರ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಾಮಾನ್ಯವಾಗಿ ಹೋಲಿಸಿದರೆ ಇನ್ನೂ ಆಮೆಯ ವೇಗದಲ್ಲಿದೆ ಎಂದರೆ ತಪ್ಪಾಗಲಾರದು.

2–10–1913ರಲ್ಲಿ ಮಹಾರಾಜರ ಆಶ್ರಯದಲ್ಲಿ ಪ್ರಾರಂಭವಾದ ಮೈಸೂರು ಬ್ಯಾಂಕ್ ರಾಷ್ಟ್ರೀಕರಣಗೊಂಡು ಭಾರತೀಯ ಸ್ಟೇಟ್ ಬ್ಯಾಂಕಿನ ಅಧೀನದಲ್ಲಿರುವುದು ತನ್ನ ಪ್ರಗತಿಗೆ ಅಡ್ಡಗಾಲು ಆಗಿದೆ. ಸ್ವತಂತ್ರ ನಿರ್ವಹಣೆ ಮಾಡಲಾರದೆ ಶಾಖಾ ವಿಸ್ತರಣೆಯಲ್ಲಾಗಲಿ, ಸಿಬ್ಬಂದಿ ನೇಮಕಾತಿಯಲ್ಲಾಗಲಿ, ಸಾಲ ನೀಡುವ ಯೋಜನೆಯಲ್ಲಾಗಲಿ ಭಾರತೀಯ ಸ್ಟೇಟ್ ಬ್ಯಾಂಕು

ತಿಳಿಸುವ ಮಾರ್ಗದರ್ಶನದಲ್ಲೇ ನಡೆಯುವ ಕಾರ್ಯವ್ಯಾಪ್ತಿಯನ್ನು ಅನುಸರಿಸುವ ಪರಿಸ್ಥಿತಿ ಮೈಸೂರು ಬ್ಯಾಂಕಿಗೆ ಬಂದೊದಗಿದೆ. ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಛೇರಿ ಬೆಂಗಳೂರಲ್ಲಿ ಪ್ರಾರಂಭವಾದ ನಂತರ ಅದರ ಹಲವಾರು ಶಾಖೆಗಳು ಕರ್ನಾಟಕದಲ್ಲಿ ಪ್ರಾರಂಭಿಸಲ್ಪಟ್ಟು ಅಧೀನ ಬ್ಯಾಂಕು ಆದ ಮೈಸೂರು ಬ್ಯಾಂಕಿಗೆ ನೇರ ಪೈಪೋಟಿ ಬ್ಯಾಂಕ್ ಆಗಿ ಕಾರ್ಯನಿರ್ವಹಿಸಲು ಪ್ರಾರಂಭ ಮಾಡಿದವು. ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳೊಂದಿಗೆ ಭಾರತೀಯ ಸ್ಟೇಟ್ ಬ್ಯಾಂಕನ್ನೂ ಎದುರಿಸುವ ಪರಿಸ್ಥಿತಿ ಮೈಸೂರು ಬ್ಯಾಂಕಿಗೆ ಬಂದೊದಗಿದೆ. ಖಾಸಗಿ ಬ್ಯಾಂಕುಗಳು ಠೇವಣಿ ಮೇಲೆ ನೀಡುತ್ತಿರುವ ಹೆಚ್ಚು ಬಡ್ಡಿ ದರ, ವಿದೇಶಿ ಬ್ಯಾಂಕುಗಳ ತಾಂತ್ರಿಕ ನೈಪುಣ್ಯ, ಖಾಸಗಿ ಹಣಕಾಸು ಸಂಸ್ಥೆಗಳ ಪೈಪೋಟಿ, ಮ್ಯೂಚುಯಲ್ ಫಂಡ್ ನೀಡುವ ಅಲ್ಪ ಕಾಲಕ್ಕೆ ಹೆಚ್ಚು ಲಾಭಾಂಶಕ್ಕೆ ಗ್ರಾಹಕರು ಆಕರ್ಷಿತರಾದರು. ಹೆಚ್ಚು ಹೆಚ್ಚು ಹಣ ತೊಡಗಿಸಲು ಪ್ರಾರಂಭಿಸಿದರು. ಬಹುತೇಕ ಬ್ಯಾಂಕುಗಳ ಗಣಕೀಕರಣ, ಉದರಿ ಕಾರ್ಡ್ ನೀಡುವಿಕೆ, ಸ್ವಯಂಚಲೀ ಟೆಲ್ಲರ್ ಯಂತ್ರಗಳ ಬಳಕೆ, ಸ್ವಿಫ್ಟ್, ಉತ್ತಮ ಗ್ರಾಹಕ ಸೇವೆ, ತಡವಿಲ್ಲದೆ ಸಾಲ ನೀಡುವಿಕೆ, ಮುಂಗಟ್ಟೆಯಲ್ಲಿ ಸೌಜನ್ಯದಿಂದ ಗ್ರಾಹಕಸೇವೆ ನೀಡುವುದು ಮೈಸೂರು ಬ್ಯಾಂಕಿಗೆ ಸವಾಲಾಗಿ ಪರಿಣಮಿಸಿದವು. ಹಳೇ ಕಾಲದ ವ್ಯವಹಾರ ಸ್ಥಗಿತಗೊಳಿಸಿ ಮೈಸೂರು ಬ್ಯಾಂಕು ಸಹ ಉತ್ತಮ ಗ್ರಾಹಕಸೇವೆ ನೀಡಲು, ವಿವಿಧ ಬ್ಯಾಂಕುಗಳು ಒಡ್ಡುವ ಸವಾಲನ್ನು ಎದುರಿಸಲು ಸಿದ್ಧವಾಯಿತು, ಪೈಪೋಟಿ ಎದುರಿಸಲು ಮೈಸೂರು ಬ್ಯಾಂಕು ಸಹ ಹಲವು ಯೋಜನೆಗಳನ್ನು ರೂಪಿಸಿಕೊಂಡು, ಸಂಬಂಧಿಸಿದ ಅಧೋರಚನೆ ನಿರ್ಮಿಸಿಕೊಂಡು ಪ್ರಗತಿಯ ಹೆಜ್ಜೆಯನ್ನಿಟ್ಟಿದೆ.

ಆದರೂ ಈ ಸವಾಲುಗಳನ್ನು ಎದುರಿಸಲು ಪರಿಹಾರ ತಂತ್ರ ವ್ಯೂಹಗಳು ಪ್ರಮುಖವಾಗಿ ಈ ರೀತಿ ಇವೆ:

(1) ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಧೀನತೆಯಿಂದ ಹೊರ ಬರುವುದು.

(2) ತಾಂತ್ರಿಕ ನೈಪುಣ್ಯ ಮೈಸೂರು ಬ್ಯಾಂಕಿನಲ್ಲಿ ಬರಲು ಗಣಕಯಂತ್ರಗಳನ್ನು ಪ್ರಮುಖ ಶಾಖೆಗಳಲ್ಲಿ ಅಳವಡಿಸುವುದು. ನೈಪುಣ್ಯಕ್ಕಾಗಿ ಸಿಬ್ಬಂದಿಗೆ ಗಣಕಯಂತ್ರದ ತರಬೇತಿ ನೀಡುವುದು.

(3) ಸಿಬ್ಬಂದಿವರ್ಗದವರು ಶಿಸ್ತಿನಿಂದ, ಸೌಜನ್ಯದಿಂದ ಗ್ರಾಹಕರೊಂದಿಗೆ ವರ್ತಿಸುವುದು. ಸಮಯ ಪರಿಪಾಲನೆ, ಸಿಬ್ಬಂದಿ ವರ್ಗದವರು ಸಂಸ್ಥೆಗಾಗಿ ಸಕ್ರಿಯವಾಗಿ ಪಾತ್ರವಹಿಸುವುದು ಮತ್ತು ತಮ್ಮ ಪಾತ್ರದಲ್ಲಿ ತೊಡಗಿಸಿಕೊಳ್ಳುವ ಜಾಗೃತ ಮನೋಭಾವ. ನೌಕರರ ಸಂಘದೊಂದಿಗೆ ಸಮಾಲೋಚಿಸಿ ನಿರ್ಮಾಣ ಮಾಡುವ ಕಾರ್ಯ ಕೈಗೊಳ್ಳಬೇಕು.

(4) ಶಾಖಾವಿಸ್ತರಣೆ ನಿಧಾನವಾದರೂ ಪ್ರಸ್ತುತ ಶಾಖೆಗಳು ಪ್ರಮುಖ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವಂತೆ ಯತ್ನಿಸುವುದು.

(5) ಸೂಕ್ತ ತರಬೇತಿ ಎಲ್ಲಾ ವರ್ಗದ ಸಿಬ್ಬಂದಿಗೆ ನೀಡುವಂತಾಗಬೇಕು.

(6) ಮೈಸೂರು ಬ್ಯಾಂಕ್ ಕರ್ನಾಟಕದಲ್ಲಿ ಪ್ರಾದೇಶಿಕ ಬ್ಯಾಂಕ್ ಆಗಿರುವುದರಿಂದ ಪ್ರಾದೇಶಿಕ ಭಾಷೆಯ ಪರಿಜ್ಞಾನ ಹೊಂದಿರುವ ಮೇಲಧಿಕಾರಿಗಳು ನೇಮಕಾತಿಗೊಳ್ಳಬೇಕು.

(7) ಮೈಸೂರು ಬ್ಯಾಂಕಿನ ಜಾಹಿರಾತು, ಠೇವಣಿ ಯೋಜನೆಗಳ ಪ್ರಚಾರ, ಸಾಲದ ನೆರವಿನ ಸವಿಸ್ತಾರವಾದ ವಿಷಯಗಳನ್ನು ಜನರಿಗೆ ತಲುಪುವಂತೆ ಪ್ರಯತ್ನಿಸಬೇಕು.

(8) ಅನಿವಾಸಿ ಬಾಹ್ಯ ಖಾತೆಗಳನ್ನು ಹೆಚ್ಚು ಹೆಚ್ಚು ತೆರೆಯಲು ಉತ್ತೇಜನ ನೀಡಬೇಕು. ಇದರಿಂದ ವಿದೇಶಿ ವಿನಿಮಯವೂ ಹೆಚ್ಚಾಗುವುದು.

(9) ಅನಾವಶ್ಯಕ ಖರ್ಚುಗಳನ್ನು ಕಡಿಮೆಮಾಡಿ, ಹೆಚ್ಚು ಲಾಭ ಪಡೆಯಲು ಕಾರ್ಯಪ್ರವೃತ್ತವಾಗಬೇಕು.

(10) ಸಿಬ್ಬಂದಿ ಉತ್ತೇಜಕಗಳನ್ನು ನೀಡುವ ಸಂಪ್ರದಾಯ ಮುಂದುವರಿಸಬೇಕು.

ಮೈಸೂರು ಬ್ಯಾಂಕು ಈ ಎಲ್ಲಾ ಸವಾಲನ್ನು ಎದುರಿಸಿ ವಿಶಿಷ್ಟ ರೀತಿಯ ತಂತ್ರವ್ಯೂಹಗಳನ್ನು ರಚಿಸಿದರೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವನ್ನು ಕಾಪಾಡಿಕೊಂಡು ಪ್ರಗತಿಪಥದಲ್ಲಿ ದಾಪುಗಾಲು ಹಾಕಲು ಹಿಂದೆ ಬೀಳುವುದಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ★

ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿದ್ಯುನ್ಮಾನ ತಂತ್ರ ಬಳಕೆ

ಶ್ರೀಮತಿ ಶಾಂತ

ಮೈಸೂರು ಬ್ಯಾಂಕ್, ಪ್ರಾದೇಶಿಕ ಕಛೇರಿ, ಬೆಂಗಳೂರು ವಲಯ

ಬ್ಯಾಂಕ್-ಗ್ರಾಹಕ ಸಂಬಂಧ ಭಕ್ತ ಮತ್ತು ದೇವರ ಸಂಬಂಧದಂತೆ. ಬ್ಯಾಂಕರನಿಗೆ ಗ್ರಾಹಕನೇ ದೇವರು. ಅವನನ್ನೊಲಿಸಿಕೊಳ್ಳಲು ಬ್ಯಾಂಕರ ಏನೆಲ್ಲವನ್ನೂ ಮಾಡಲು ಸಿದ್ಧವಿರಬೇಕು. ಆವನು ಏನೆಲ್ಲ ಮಾಡುತ್ತಾನೆಂಬುದರ ವಿವರ ಇಲ್ಲಿದೆ.

1991–92ರಿಂದೀಚೆಗೆ ಭಾರತೀಯ ಹಣಕಾಸು ರಂಗ ಸುಧಾರಣೆಯ ಹಾಗೂ ಮೂಲಭೂತ ಬದಲಾವಣೆಯ ಕಡೆಗೆ ದಾಪುಗಾಲು ಹಾಕುತ್ತಿದೆ. ಮುಕ್ತ ಆರ್ಥಿಕ ನೀತಿ ಹಲವಾರು ಅವಕಾಶಗಳಿಗೆ, ಅನ್ವೇಷಣೆಗಳಿಗೆ ಬ್ಯಾಂಕುಗಳನ್ನು ಕೈಬೀಸಿ ಕರೆಯುತ್ತಿದೆ. ಆದರೆ ಈ ಎಲ್ಲ ಅವಕಾಶಗಳನ್ನೂ ಅನ್ವೇಷಣೆಗಳನ್ನೂ ಸವಾಲಾಗಿ ಸ್ವೀಕರಿಸಿ ಮುನ್ನುಗ್ಗಿದರೆ ಮಾತ್ರ ನಾವು ಜಯ ಪಡೆಯಬಹುದು. ಇಲ್ಲವಾದಲ್ಲಿ ನಮ್ಮ (ಬ್ಯಾಂಕುಗಳ) ಅವಸಾನ ಖಂಡಿತ.

ಬ್ಯಾಂಕರನ ಜೀವಾಳವೇ ಗ್ರಾಹಕ

ಗ್ರಾಹಕನಿಗೆ ಕೊಡುವ ಸೇವೆಯ ಗುಣಮಟ್ಟವನ್ನು ಸುಧಾರಿಸಿ ಆ ಮೂಲಕ ಬ್ಯಾಂಕುಗಳ ಉತ್ಪಾದಕತೆ ಹಾಗೂ ಲಾಭದಾಯಕತೆಯನ್ನು ಹೆಚ್ಚಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಆರ್ಥಿಕ ನೀತಿಯಲ್ಲಿ ಕೆಲವಾರು ಮುಖ್ಯ ಬದಲಾವಣೆಗಳನ್ನು ತಂದಿದೆ. ಭಾರತ ಸರಕಾರದ ಆದೇಶದ ಪ್ರಕಾರ, ಗ್ರಾಹಕ ಸೇವೆಯ ಗುಣಮಟ್ಟ ಸುಧಾರಿಸಲು ಶ್ರೀ ಎಂ. ಎಸ್. ಗೋಯಿಪುರಿಯ (ನಿರ್ದೇಶಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ) ನೇತೃತ್ವದಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಒಂದು ಸಮಿತಿಯನ್ನು 1990ರಲ್ಲಿ ನೇಮಿಸಿತು. ಈ ಸಮಿತಿ ತನ್ನ ವರದಿಯನ್ನು 1992ರಲ್ಲಿ ಸಲ್ಲಿಸಿತು. ವರದಿಯ ಶೀಘ್ರ ಅನುಷ್ಠಾನಕ್ಕಾಗಿ ಸಲಹೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಯಿತು. ಆ ಪ್ರಕಾರ ಭಾಗ ಒಂದರಲ್ಲಿ ಬ್ಯಾಂಕುಗಳೇ ನೇರವಾಗಿ ಜಾರಿಗೆ ತರಬಹುದಾದಂತಹ ಸಲಹೆಗಳು ಒಳಗೊಂಡಿರುತ್ತವೆ. ಭಾಗ ಎರಡರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಅನುಮತಿ ಪಡೆಯಬೇಕಾದ ಸಲಹೆಗಳು. ಭಾಗ ಮೂರರಲ್ಲಿ ಭಾರತ ಸರಕಾರದ ಅನುಮೋದನೆ ಬೇಕಾದ ಸಲಹೆಗಳು. ಭಾಗ ನಾಲ್ಕರಲ್ಲಿ ಬ್ಯಾಂಕುಗಳು ಹಾಗೂ ಕಾರ್ಮಿಕ ಸಂಘಟನೆಗಳ ಜತೆ ಚರ್ಚಿಸಿ ನಂತರ ಜಾರಿಗೊಳಿಸಬಹುದಾದ ಸಲಹೆಗಳು.

ಭಾಗ ಒಂದರಲ್ಲಿ ಮಾಡಿರುವಂತಹ ಸಲಹೆಗಳ ಅನುಷ್ಠಾನ ನೇರವಾಗಿ ಬ್ಯಾಂಕಿನ ಆಡಳಿತ ವರ್ಗದ ನಿರ್ಧಾರಕ್ಕೆ ಸೀಮಿತವಾಗಿರುತ್ತದೆ. ಲಭ್ಯವಿರುವ ಕಾರ್ಮಿಕ/ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಗ್ರಾಹಕ ಸೇವೆಯ ಗುಣಮಟ್ಟ ಹೇಗೆ ಸುಧಾರಿಸಬೇಕು ಎಂಬ ವಿಚಾರ ಈ ಸಲಹೆಗಳು ಒಳಗೊಂಡಿವೆ. ಈ ಪ್ರಕಾರ ಎಲ್ಲ ಬ್ಯಾಂಕುಗಳಲ್ಲಿ ವ್ಯವಹಾರದ ವೇಳೆ, ಕೆಲಸದ ವೇಳೆ, ಒಂದು ಡಿ.ಡಿ.ಗೆ ಹಣ ಸಂದಾಯ ಮಾಡಿದ ಮೇಲೆ ಎಷ್ಟು ಕಾಲದಲ್ಲಿ ಪಡೆಯಬಹುದು, ಯಾವ ಪರಿಮಿತಿಯ ಒಳಗೆ ಆ ಡಿ.ಡಿ ಯನ್ನು ಗ್ರಾಹಕ ವರ್ಗಾಯಿಸಬಹುದು ಮುಂತಾದ ಮಾಹಿತಿಗಳನ್ನು ಬ್ಯಾಂಕುಗಳ ನೋಟೀಸು ಬೋರ್ಡಿನಲ್ಲಿ ತೋರಿಸಲಾಗಿದೆ. ಈ ಮೂಲಕ ಗ್ರಾಹಕ ತನ್ನ ಹಕ್ಕನ್ನು ಚಲಾಯಿಸಬಹುದಾಗಿದೆ. ಗ್ರಾಹಕರ ಅನುಕೂಲಕ್ಕಾಗಿರುವ ಟೆಲ್ಲರ್ ಕೌಂಟರ್‌ಗಳ ಉಪಯೋಗವೂ ಒಂದು ಉತ್ತಮ ಪ್ರಯೋಗ. ಇವೇ ಅಲ್ಲದೆ, ಗ್ರಾಹಕರ ಮಾಹಿತಿಗಾಗಿ 'ನಾನು ನಿಮಗೆ ಸಹಾಯ ಮಾಡಬಹುದೇ?' ಎಂಬ ನಾಮಫಲಕವನ್ನು ಎಲ್ಲ ಬ್ಯಾಂಕುಗಳ ಕೌಂಟರಿನಲ್ಲೂ ಹಾಕಲಾಗಿದೆ.

ಭಾಗ 2, 3 ಹಾಗೂ 4ರಲ್ಲಿ ಬರುವಂತಹ ಸಲಹೆಗಳು ಇನ್ನೂ ಉಪಯೋಗಕಾರಿ ಹಾಗೂ ಪರಿಣಾಮಕಾರಿಯಾಗಿವೆ. ವಿದ್ಯುನ್ಮಾನ ತಂತ್ರಜ್ಞಾನವನ್ನು ಹೆಚ್ಚುಹೆಚ್ಚಾಗಿ ಬಳಸಿ ಗ್ರಾಹಕಸೇವೆಯಲ್ಲಿನ ಗುಣಮಟ್ಟವನ್ನು ಉತ್ತಮಪಡಿಸಿ, ಬ್ಯಾಂಕುಗಳ ಉತ್ಪಾದಕತೆ ಹಾಗೂ ಲಾಭದಾಯಕತೆಗಳನ್ನು ಹೆಚ್ಚುಗೊಳಿಸಬೇಕೆಂಬ ಉದ್ದೇಶದಿಂದ, 1993ರಲ್ಲಿ ರಾಷ್ಟ್ರೀಯ ಬ್ಯಾಂಕುಗಳ ಒಕ್ಕೂಟವು ಬ್ಯಾಂಕುಗಳ ಕಾರ್ಮಿಕ ಸಂಘಟನೆಗಳೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದದ ಉದ್ದೇಶವೇನೆಂದರೆ ಬ್ಯಾಂಕುಗಳನ್ನು ಹಂತಹಂತವಾಗಿ ಸಂಪೂರ್ಣವಾಗಿ ಗಣಕೀಕರಣಗೊಳಿಸುವುದು. ಈ ನಿಟ್ಟಿನಲ್ಲಿ ನಗರಪ್ರದೇಶದಲ್ಲಿರುವ ಹಲವಾರು ಬ್ಯಾಂಕ್ ಶಾಖೆಗಳು ಈಗಾಗಲೇ ಸಂಪೂರ್ಣವಾಗಿ ಗಣಕೀಕರಣಗೊಂಡಿವೆ'

ಇನ್ನೂ ಕೆಲವು ಗಣಕೀಕರಣಗೊಳ್ಳುವ ಹಂತದಲ್ಲಿವೆ. ಬ್ಯಾಂಕಿನ ದಿನನಿತ್ಯದ ಕಾರ್ಯ ನಿರ್ವಹಿಸಲು ಈಗಾಗಲೇ ಹಲವಾರು ವಿದ್ಯುನ್ಮಾನ ಯಂತ್ರಗಳು ಬಳಕೆಯಲ್ಲಿವೆ. ವಿದೇಶೀ ಬ್ಯಾಂಕುಗಳು ಈ ವಿದ್ಯುನ್ಮಾನ ಯಂತ್ರಗಳ ಹೆಚ್ಚು ಪ್ರಯೋಜನವನ್ನು ಪಡೆಯುತ್ತಿವೆ. ನಮ್ಮಲ್ಲಿ ಬಳಕೆಯಲ್ಲಿರುವ ವಿದ್ಯುನ್ಮಾನ ಯಂತ್ರಗಳಲ್ಲಿ ಮುಖ್ಯವಾದುವು:

1 ಸ್ವಯಂಚಲೀ ಷರಾಫ್ ಯಂತ್ರ (ಎ. ಟಿ. ಎಂ.)

ಈ ಯಂತ್ರದ ಸಹಾಯದಿಂದ ನಾವು ನಮ್ಮ ಬ್ಯಾಂಕಿಂಗ್ ಆವಶ್ಯಕತೆಗಳನ್ನು ದೇಶದ ಯಾವುದೇ ಭಾಗದಿಂದ ಯಾವುದೇ ದಿನ/ವೇಳೆಯಲ್ಲಿ ಪೂರೈಸಿಕೊಳ್ಳಬಹುದು. ಈ ಯಂತ್ರದ ಮೂಲಕ ಹಣವನ್ನು ಕಟ್ಟಬಹುದು, ಹಿಂದಕ್ಕೆ ಪಡೆಯಬಹುದು, ಚೆಕ್ಕನ್ನು ಕಟ್ಟಿ, ಹಣವನ್ನು ಹಿಂದಕ್ಕೆ ಪಡೆಯಬಹುದು, ಬ್ಯಾಂಕು ವ್ಯವಹಾರಕ್ಕೋಸ್ಕರ ಗ್ರಾಹಕ ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲಬೇಕಾಗಿಲ್ಲ, ಕೌಂಟರ್‌ನಲ್ಲಿ ಕಾಯಬೇಕಾಗಿಲ್ಲ. ಇವೇ ಅಲ್ಲದೆ ಇಲ್ಲಿ ಬ್ಯಾಂಕಿಂಗ್ ವ್ಯವಹಾರ ಒಂದು ಕೋಡ್ ನಂಬ್ರದ ಮೂಲಕ ನಡೆಯುವುದರಿಂದ ವ್ಯವಹಾರವೂ ಗೌಪ್ಯವಾಗಿರುತ್ತದೆ. ಮುಂಬಯಿಯಂತಹ ದೊಡ್ಡ ನಗರದಲ್ಲಿ ಇಂತಹ ಮೆಶಿನುಗಳನ್ನು ಕೃತಕ ಉಪಗ್ರಹಗಳ ಸಹಾಯದಿಂದ ಒಂದಕ್ಕೊಂದು ಸಂಪರ್ಕಿಸಲಾಗಿದೆ. ನಾವು ಯಾವ ಊರಿಗೆ ಪ್ರಯಾಣ ಬೆಳೆಸಿದರೂ, ನಮ್ಮ ಖಾತೆ ನಮ್ಮೊಂದಿಗೆ ಬರುತ್ತದೆ. ಸಿಟಿ ಬ್ಯಾಂಕು ಮತ್ತು ಸೆಂಚುರಿಯನ್ ಬ್ಯಾಂಕುಗಳಲ್ಲಿ ಸಂಪೂರ್ಣವಾಗಿ ಎ.ಟಿ.ಎಂ. ಮೆಶಿನ್‌ಗಳ ಸಹಾಯದಿಂದ ವ್ಯವಹಾರ ನಡೆಸಲಾಗುತ್ತದೆ. ರಾಷ್ಟ್ರೀಯ ಬ್ಯಾಂಕುಗಳ ಒಕ್ಕೂಟವು ಮುಂಬಯಿ ನಗರದಲ್ಲಿ ಇಂತಹ 125 ಮೆಶಿನುಗಳನ್ನು 1997ರ ಒಳಗಾಗಿ ಸ್ಥಾಪಿಸಲು ಕ್ರಮ ಕೈಗೊಂಡಿದೆ. ಬೆಂಗಳೂರು ನಗರಪ್ರದೇಶದ ಕೆಲವಾರು ಬ್ಯಾಂಕು ಶಾಖೆಗಳಲ್ಲಿ ಈ ಯಂತ್ರದ ಸೌಲಭ್ಯ ಇರುವುದರಿಂದ ಗ್ರಾಹಕರು ಇದರಿಂದ ಹೆಚ್ಚಿನ ಪ್ರಯೋಜನ ಪಡೆಯುತ್ತಿದ್ದಾರೆ.

2 ನೋಟು ಎಣಿಸುವ ಯಂತ್ರ

ನಗರ ಪ್ರದೇಶದ ಬ್ಯಾಂಕಿನ ದೊಡ್ಡ ದೊಡ್ಡ ಶಾಖೆಗಳಲ್ಲಿ ನೋಟುಗಳನ್ನು ವಿತರಿಸುವುದು, ನಗದು ಗುಮಾಸ್ತನಿಗೆ ಬಹಳ ಪ್ರಯಾಸದ ಕೆಲಸ. ಅಲ್ಲದೆ ಸಾಕಷ್ಟು ಸಮಯವನ್ನು ಹಾಳು ಮಾಡುತ್ತದೆ. ಈ ಉದ್ದೇಶದಿಂದ ನೋಟು ಎಣಿಸುವ ಯಂತ್ರ ಅಂದರೆ ಹಣ ಲೆಕ್ಕ ಮಾಡುವ ಯಂತ್ರದ ಸಹಾಯವನ್ನು ಪಡೆಯಲಾಗುವುದು. ಇದರಿಂದ ಹಲವಾರು ಗುಮಾಸ್ತರ ಕೆಲಸ ಹಾಗೂ ಸಮಯದಲ್ಲಿ ಉಳಿತಾಯವಾಗಿದೆ. ಆ ಯಂತ್ರದ ಸಹಾಯದಿಂದ ಗ್ರಾಹಕನೂ ಹೊಸ ಹೊಸ ನೋಟುಗಳನ್ನು ಪಡೆಯಬಹುದು. ಅಲ್ಲದೆ ತಾನು ಪಡೆದ ಹಣ ಸರಿಯಾಗಿದೆಯೇ ಇಲ್ಲವೇ ಎಂದು ಪರಿಶೀಲಿಸಲು ಸಹಾಯಕವಾಗುತ್ತದೆ.

3 ವಿದ್ಯುನ್ಮಾನೀಯ ನಗದು ರವಾನೆ

ಈ ಯಂತ್ರದ ಸಹಾಯದಿಂದ, ಎಷ್ಟೇ ದೊಡ್ಡ ಮೊತ್ತವಿರಲಿ. ಎಷ್ಟೇ ಬೇಗ ತಲುಪಬೇಕೆಂದಿರಲಿ, ಒಂದು ಊರಿನಿಂದ, ಒಂದು ಊರಿಗೆ ಬಹಳ ಶೀಘ್ರವಾಗಿ, ಸುರಕ್ಷಿತವಾಗಿ ತಲುಪಿಸಬಹುದು. ಇದರ ಕೆಲಸ ಒಂದು ನಿಶ್ಚಿತ ನಂಬ್ರದ ಮೂಲಕ ನಡೆಯುತ್ತದೆ. ಇದರ ಕೆಲಸವನ್ನು ಉಪಗ್ರಹದ ಮೂಲಕ ಸಂಪರ್ಕಿಸಲಾಗುವುದು.

4 ಸ್ಮಾರ್ಟ್ ಕಾರ್ಡು (Smart Card)

ಇದು ಒಂದು ರೀತಿಯ ಪ್ಲಾಸ್ಟಿಕ್ ಕಾರ್ಡ್. ಈ ಕಾರ್ಡು ಪಡೆಯಬೇಕಾದರೆ ಗ್ರಾಹಕ ತಾನು ಕಾರ್ಡು ಪಡೆಯಬೇಕಾದ ಬ್ಯಾಂಕಿನಲ್ಲಿ ಒಂದು 'ಸ್ಮಾರ್ಟ್ ಖಾತೆ'ಯನ್ನು ತೆರೆದು ಅದರಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ಕಟ್ಟಬೇಕು. ಅವನು ಜಮಾ ಮಾಡಿದ ಮೊತ್ತ, ಸ್ಮಾರ್ಟ್ ಕಾರ್ಡಿನಲ್ಲಿ ನಮೂದಿಸಲ್ಪಡುತ್ತದೆ. ಗ್ರಾಹಕ ತಾನು ಯಾವ ಬ್ಯಾಂಕಿನಿಂದ, ಸ್ಮಾರ್ಟ್ ಕಾರ್ಡನ್ನು ಪಡೆದಿರುತ್ತಾನೋ, ಆ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಂದು ನಿರ್ದಿಷ್ಟ ಕೋಡ್ ನಂಬ್ರದ ಸಹಾಯದಿಂದ ತಾನು ಮಾಡಿದ ಜಮಾರಾಶಿಯನ್ನು ಹಿಂದಕ್ಕೆಪಡೆಯಬಹುದು. ಈ ಸೌಲಭ್ಯವನ್ನು ಕೊಡುವ ಬ್ಯಾಂಕಿನ ಶಾಖೆಗಳನ್ನು ಕೃತಕ ಉಪಗ್ರಹದ ಸಹಾಯದಿಂದ, ಒಂದಕ್ಕೊಂದನ್ನು ಸಂಪರ್ಕಿಸಲಾಗುವುದು. ಇದರಿಂದಾಗಿ, ಈ ವಿಧಾನದ ಸೌಲಭ್ಯವನ್ನು ನಾವು ಎಲ್ಲಿ/ಯಾವಾಗ ಬೇಕಾದರೂ ಪಡೆಯಬಹುದು. ಉದಾ: ನನಗೆ ಈಗ ರೂ. 5,000 ಅಗತ್ಯ ಇದ್ದಲ್ಲಿ, ನನ್ನ ಖಾತೆಯಿಂದ ರೂ. 5,000ನ್ನು ನನ್ನ ಕಾರ್ಡಿಗೆ ವರ್ಗಾಯಿಸಿದಲ್ಲಿ ನಾನು ಈ ಮೊತ್ತವನ್ನು ಬಸ್ ನಿಲ್ದಾಣದಲ್ಲಾಗಲಿ, ಅಂಗಡಿಯಲ್ಲಾಗಲಿ, ವಿಮಾನ ನಿಲ್ದಾಣದಲ್ಲೇ ಆಗಲಿ, ಎಲ್ಲಿ/ಯಾವಾಗ ಬೇಕೆಂದರಲ್ಲಿ ಸುಲಭವಾಗಿ ವಾಪಸ್ಸು ಪಡೆಯಬಹುದು. ಒಂದು ವೇಳೆ ಈ ಕಾರ್ಡು ಕಳೆದುಹೋದರೂ ಎಲ್ಲ ವ್ಯವಹಾರಗಳು ಸಂರಕ್ಷಿಸಲ್ಪಡುವುದರಿಂದ (ಎಂಟ್ರಿ), ಕಾರ್ಡು ಕಳೆದುಹೋದ ಬಗ್ಗೆ ಎಚ್ಚರವಹಿಸಲು ಹಾಗೂ ಗ್ರಾಹಕನ ಖಾತೆಯಲ್ಲಿರುವ ಮೊತ್ತವನ್ನು ಕಂಡುಕೊಳ್ಳಲು ಈ ವಿಧಾನ ಬಹಳ ಉಪಯೋಗ.

5. ಎಸ್.ಡಬ್ಲ್ಯೂ.ಐ.ಎಫ್.ಟಿ. (SWIFT)

ವಿದೇಶೀ ವ್ಯಾಪಾರ ವಹಿವಾಟುಗಳನ್ನು ಹೊಂದಿರುವ ಗ್ರಾಹಕ ತನ್ನ ದೈನಂದಿನ ಕೆಲಸಕಾರ್ಯಗಳನ್ನು ಈ ವಿಧಾನದ ಮೂಲಕ ಸುಲಭವಾಗಿ ಪೂರೈಸಿಕೊಳ್ಳಬಹುದು. ವಿದೇಶಕ್ಕೆ ಹಣ ಕಳುಹಿಸಬೇಕಾದರೆ ಬಹಳ ಶೀಘ್ರವಾಗಿ ಕಳುಹಿಸಬಹುದು. ಹಾಗೆಯೇ ವಿದೇಶಿ ಗ್ರಾಹಕನಿಂದ ಹಣ ಪಡೆಯಬೇಕಾದರೆ ಅಷ್ಟೇ ಶೀಘ್ರವಾಗಿ ಪಡೆಯಬಹುದು.

ಈ ಎಲ್ಲ ತಂತ್ರಜ್ಞಾನವನ್ನು ಬಳಸಿಕೊಂಡು ನಾವು

ಅಂದರೆ ದೇಶಿಯ ಬ್ಯಾಂಕುಗಳ, ವಿದೇಶಿ ಬ್ಯಾಂಕುಗಳ ಜತೆ ಪೈಪೋಟಿ ನಡೆಸಬೇಕಾಗಿದೆ. ಬ್ಯಾಂಕುಗಳು ಕೆಲವೊಂದು ವಿಶಿಷ್ಟ ಪರಿಣತ ಸೇವೆಗೆ ಈಗಾಗಲೇ ಕೆಲವು ಪರಿಣತ (specialised) ಬ್ಯಾಂಕುಗಳನ್ನು ತೆರೆದಿವೆ. ಉದಾ: ಸಣ್ಣ ಕೈಗಾರಿಕಾ ಬ್ಯಾಂಕು, ಕೈಗಾರಿಕಾ ಹಣಕಾಸು ಬ್ಯಾಂಕು, ಹೈಟೆಕ್ ವ್ಯವಸಾಯ ಅಭಿವೃದ್ಧಿ ಬ್ಯಾಂಕು, ಅನಿವಾಸಿ ಭಾರತೀಯ ಬ್ಯಾಂಕು ಮೊದಲಾದುವುಗಳು.

ಬ್ಯಾಂಕುಗಳು ಕಾರ್ಮಿಕನ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಅವನಿಗೆ ಕಾಲಕಾಲಕ್ಕೆ ಬೇಕಾದ ತರಬೇತಿಯನ್ನು ಕೊಡುತ್ತಾ ಬರಬೇಕು. ಕಾರ್ಮಿಕನ ಕಾರ್ಯದಕ್ಷತೆಯನ್ನು ಗುರುತಿಸಿಕೊಂಡು ಅವನಿಗೆ ಆಗಾಗ ಬಡ್ತಿ, ಭತ್ಯೆಗಳನ್ನು ನೀಡುತ್ತಾ ಇರಬೇಕು. ಆವಾಗ ನಮ್ಮಲ್ಲಿರುವ ಅಮೂಲ್ಯ ಮಾನವಸಂಪನ್ಮೂಲ, ವಿದೇಶಗಳಿಗೆ ರವಾನೆ ಆಗುವುದು ತಪ್ಪುತ್ತದೆ. ಉದಾ: ನಮ್ಮೊಂದಿಗಿದ್ದ ಕೆಲವು ದಕ್ಷ, ಬುದ್ಧಿವಂತ ಆಫೀಸರುಗಳು, ತಮ್ಮ ದಕ್ಷತೆಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗದೆ ಬೇರೆ ವಿದೇಶೀ ಬ್ಯಾಂಕುಗಳಿಗೆ ವಿದೇಶಕ್ಕೆ ಹೋಗುತ್ತಿದ್ದಾರೆ. ಇಂದಿನ ಈ ಆರ್ಥಿಕ ಸ್ಥಿತಿಯಲ್ಲಿ ಇದು ಒಳ್ಳೆಯ ಬೆಳವಣಿಗೆ ಅಲ್ಲ.

ಈ ಎಲ್ಲ ತಂತ್ರಜ್ಞಾನವನ್ನು ಬಳಸಿ ನಾವು ಬ್ಯಾಂಕುಗಳ ಉತ್ಪಾದಕತೆ ಹಾಗೂ ಲಾಭದಾಯಕತೆಯನ್ನು ಹೆಚ್ಚಿಸಲು ಸಾಧ್ಯ ಎಂದು ನನ್ನ ಅನಿಸಿಕೆ. ★

ಬ್ಯಾಂಕುಗಳ ಉತ್ಪಾದಕತೆ ಮತ್ತು ಲಾಭದಾಯಕತೆ

[11ನೇ ಪುಟದಿಂದ ಮುಂದುವರಿದುದು]

ಇತರ ಸೇವೆಗಳಿಂದ ಬರುವ ಆದಾಯ

ಲೇವಾದೇವಿಯಲ್ಲದೆ ಇತರ ಸೇವೆಗಳನ್ನು ನೀಡಿ ಆದಾಯ ಗಳಿಸುವ ವಿಭಾಗಗಳೆಂದರೆ:

1 ಭದ್ರತಾ ಕಪಾಟು,
2 ಅಂಚೆ ಮತ್ತು ತಂತಿ ವರ್ಗಾವಣೆ,
3 ಡಿಮಾಂಡ್ ಡ್ರಾಫ್ಟ್,
4 ವಣಿಕ ಬ್ಯಾಂಕಿಂಗ್,
5 ತೆರಿಗೆ ವಸೂಲಾತಿ,
6 ಇನ್ನಿತರ ಸೇವೆಗಳು.

ಈ ವಿಭಾಗಗಳಲ್ಲಿ ಸಮರ್ಪಕವಾಗಿ ಸೇವೆಯನ್ನು ನೀಡಿದರೆ ಉತ್ಪಾದನೆ ಹೆಚ್ಚುತ್ತದೆ.

ಬ್ಯಾಂಕುಗಳ ದಕ್ಷತೆ: ಬ್ಯಾಂಕಿಂಗ್ ಸಂಸ್ಥೆ ತನ್ನ ಹತ್ತಿರ ಇರುವ ಸಂಪನ್ಮೂಲಗಳಿಂದ ಎಲ್ಲ ರೀತಿಯ ಹೊಣೆಗಾರಿಕೆಯನ್ನೂ ನಿಭಾಯಿಸಿ ತನ್ನ ನಿಗದಿತ ಉತ್ಪಾದನೆಯ ಗುರಿಯನ್ನು ಮುಟ್ಟಿದೆ ಎಂದರೆ ಅದು ದಕ್ಷ ಆಡಳಿತದಲ್ಲಿದೆ ಎಂದು ಹೇಳಬಹುದು. ಈ ದಕ್ಷತೆಯನ್ನು ಶೇಕಡಾವಾರು ನಮೂದಿಸಬಹುದು. ನಿಗದಿತ ಗುರಿ ಮತ್ತು ಸಾಧಿಸಿದ ಗುರಿಯನ್ನು ಶೇಕಡಾ (%) ತೆಗೆದರೆ ಅದನ್ನು ಇತರ ಸಂಸ್ಥೆಗಳೊಂದಿಗೆ ಹೋಲಿಸಿ ನೋಡಬಹುದು. ಈ ಕಾರ್ಯಕ್ಷಮತೆ ಮತ್ತು ದಕ್ಷತೆಯನ್ನು ಅಳೆಯಲು ಇತ್ತೀಚೆಗೆ ಕೇಂದ್ರ ಸರ್ಕಾರ ರಚಿಸಿದ ನರಸಿಂಹಂ ಸಮಿತಿ ಹಲವಾರು ಶಿಫಾರಸುಗಳನ್ನು ಮಾಡಿದೆ. (ಸಮಿತಿಯ ಶಿಫಾರಸುಗಳನ್ನು ಇಲ್ಲಿ ವಿಸ್ತಾರವಾಗಿ ಚರ್ಚಿಸಿಲ್ಲ) ಕೇಂದ್ರ ಬ್ಯಾಂಕ್ ಎಲ್ಲ ಬ್ಯಾಂಕಿಂಗ್ ಸಂಸ್ಥೆಗಳಿಂದ ತನಗೆ ಬೇಕಾದ ಅಂಕಿ ಅಂಶಗಳನ್ನು ತರಿಸಿಕೊಳ್ಳುತ್ತದೆ. ಇತ್ತೀಚಿನ ಅಂಕಿ ಅಂಶಗಳು ಈ ರೀತಿ ಇವೆ:

ಕ್ರ.ಸಂ.	ಬ್ಯಾಂಕುಗಳು/ಕ್ಷೇತ್ರ	ಶೇಕಡಾ ದಕ್ಷತೆ
1	ವಿದೇಶೀ ಬ್ಯಾಂಕುಗಳು	181
2	ಭಾರತೀಯ ಸ್ಟೇಟ್ ಬ್ಯಾಂಕ್	109
3	ಭಾರತೀಯ ಸ್ಟೇಟ್ ಬ್ಯಾಂಕ್‌ನ ಸಹವರ್ತಿ ಬ್ಯಾಂಕ್‌ಗಳು	79
4	ರಾಷ್ಟ್ರೀಕೃತ ಬ್ಯಾಂಕ್‌ಗಳು	82
5	ಖಾಸಗಿ ಬ್ಯಾಂಕುಗಳು	74

ಇಂದು ಬ್ಯಾಂಕಿಂಗ್ ಸಂಸ್ಥೆಗಳು ಕೇವಲ ಲೇವಾದೇವಿ ಸಂಸ್ಥೆಗಳಾಗಿ ಉಳಿಯದೆ ಹಲವಾರು ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ಸ್ವತಃ ಭಾಗವಹಿಸಬೇಕಾಗಿದೆ. ಬ್ಯಾಂಕಿಂಗ್ ಸಂಸ್ಥೆ ಎಷ್ಟರ ಮಟ್ಟಿಗೆ ಸಾಮಾಜಿಕ ಅಭಿವೃದ್ಧಿ ,ಕಾರ್ಯದಲ್ಲಿ ತೊಡಗಿದೆ ಎಂಬುದೂ ಬಹಳ ಮುಖ್ಯ. ಈವರೆವಿಗೆ ಉತ್ಪಾದನೆ ಮತ್ತು ಉತ್ಪಾದಕತೆಯ ವಿಚಾರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಇನ್ನು ಮುಂದಿನ ಅಧ್ಯಯನದಲ್ಲಿ ಹೊಸ ಹೊಸ ಆಯಾಮಗಳು ಸೇರಿಕೊಂಡು ಉತ್ಪಾದಕತೆಯ ಪರಿಕಲ್ಪನೆ ಇನ್ನೂ ಹೆಚ್ಚು ಅರ್ಥಪೂರ್ಣವಾಗುವುದು ಎಂದು ಆಶಿಸೋಣ. ★

R. N. 36702/83

PRINTED BY G. H. KRISHNAMURTHY, MYSORE PRINTING AND PUBLISHING HOUSE, ASHOKA ROAD, MYSORE-1